ಮೇಲ್ಕಂಡ ಸಹಕಾರ ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ದಿನಾಂಕ 31.03.2024ರ ಅಂತ್ಯಕ್ಕೆ ಬ್ಯಾಂಕಿನವರು ಹಾಜರುಪಡಿಸಿದ ಲೆಕ್ಕಪತ್ರಗಳ ಆಧಾರದ ಮೇಲೂ ಪರಿಶೋಧನಾ ವೇಳೆಯಲ್ಲಿ ನೀಡಿದ ಸಮಜಾಯಿಷಿಗಳ ಆಧಾರದ ಮೇಲೂ ಹಾಗೂ ನಮ್ಮ ಇದೇ ದಿನದ ಇಲಾಖೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಲೆಕ್ಕ ಪರಿಶೋಧನಾ ವರದಿ ಮತ್ತು ನಮ್ಮ ಮುಖ್ಯ ವರದಿಗೆ ಒಳಪಟ್ಟು ಸಾಲಾಂತ್ಯಕ್ಕೆ ಬ್ಯಾಂಕಿನ ನಿಜವಾದ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತೇವೆ.

**ಮೆ॥ ಬಿ ಆರ್ ಆರ್ ಅಂಡ್ ಕಂಪನಿ**
ಚಾರ್ಟರ್ಡ್ ಅಕೌಂಟೆಂಟ್ಸ್
FRN 012266S

ದಿನಾಂಕ: 03–06–2024
ಸ್ಥಳ: ಬೆಂಗಳೂರು

ಸಹಿ /–
**(CA ರವೀಂದ್ರ ಎಸ್ ಕೋರೆ)**
ಪಾಲುದಾರರು
ಸ. ಸಂಖ್ಯೆ 218915

ಮಾನ್ಯ ಸದಸ್ಯರು/ಖಾತೆದಾರರು RTGS ಹಾಗೂ NEFT/IMPS ಮೂಲಕ ನೇರ ಹಣ ವರ್ಗಾವಣೆಗೆ ತಮ್ಮ ಖಾತೆಯ 12 Digit ಖಾತೆ ಸಂಖ್ಯೆಯನ್ನು ನಮೂದಿಸತಕ್ಕದ್ದು.

ಆತ್ಮ ವಿಶ್ವಾಸ ಮತ್ತು ಪರಿಶ್ರಮಗಳು 'ಸೋಲು' ಎಂಬ ರೋಗವನ್ನು ಕೊಲ್ಲುವುದಕ್ಕೆ ಇರುವ ಅತ್ಯುತ್ತಮ ಔಷದ. ಅದೇ ನಿಮ್ಮನ್ನು ಯಶಸ್ವಿ ವ್ಯಕ್ತಿಯನ್ನಾಗಿ ಮಾಡಬಲ್ಲದು.

**– ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**

## CERTIFICATE

We have verified the Balance Sheet of the above Bank as on 31.3.2024 with the books of accounts maintained and produced by the Bank. We have obtained necessary information and explanations from the staff of the Bank. In our opinion and subject to our main report and audit report of even date as prescribed by the Co-operation Audit Department and Reserve Bank of India, exhibit a true and fair state of affairs of the Bank as on 31.03.2024.

**for M/s. B R R & Company**
Chartered Accountants
FRN 012266S

Date : 03-06-2024
Place : Bangalore

**Sd /-**
**(CA Raveendra S. Kore)**
Partner
M.No.218915

### ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :

(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–

(i) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರ ರೂಪಾಯಿಗಳು ಅಥವಾ

(ii) ಸದಸ್ಯನು ತನ್ನ ಚಾಲ್ತಿ ಖಾತೆ / ಉಳಿತಾಯ ಖಾತೆ / ಇತರೇ ಠೇವಣಿ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಎರಡು ಇರತಕ್ಕದ್ದು. ಈ ಎರಡು ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಬ್ಯಾಂಕು ಪ್ರತಿ ವರ್ಷ ಷೇರು ಡಿವಿಡೆಂಡ್ ಮೊತ್ತವನ್ನು ಹಾಗೂ ಠೇವಣಿ ಬಡ್ಡಿಯನ್ನು ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸುವ ವ್ಯವಹಾರವು ಒಳಗೊಂಡಿರುತ್ತದೆ ಅಥವಾ

(iii) ನಿಯಮಗಳಿಗೆ ಒಳಪಟ್ಟು ಕನಿಷ್ಠ ರೂ. 5,000/– ಸಾಲ. ಈ ಸಾಲದ ಮೊತ್ತವು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು.

(2) ಮೇಲೆ ತಿಳಿಸಿದ ಕನಿಷ್ಠ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

(3) ರಿಸರ್ವ್ ಬ್ಯಾಂಕು ನೀಡಿರುವ **ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ.)** / ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯವಾಗತಕ್ಕದ್ದು.

# ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

# ಲೆಕ್ಕಪರಿಶೋಧನಾ ವರದಿಯ ವಿಸ್ತೃತ ನಮೂನೆ (LFAR)

# ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು ಇದರ

# 2023-2024ನೇ ಸಾಲಿನ ಲೆಕ್ಕಪರಿಶೋಧನಾ ವರದಿ

## ಭಾಗ - I

(ಹಣ ದುರುಪಯೋಗ ಹಾಗೂ ಇನ್ನಿತರೆ ಗಂಭೀರ ನ್ಯೂನತೆಗಳಿಗೆ ಕಂಡಿಕೆ ನೋಡುವುದು)

**(1) ಬ್ಯಾಂಕಿನ ವಿವರಗಳು:**

| | | | |
|---|---|---|---|
| 1. | **ಬ್ಯಾಂಕಿನ ಹೆಸರು** | : | **ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.** |
| 2. | **ಬ್ಯಾಂಕಿನ ಕೇಂದ್ರ ಕಛೇರಿ ವಿಳಾಸ** | : | ನಂ. 146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003. |
| 3. | **ಬ್ಯಾಂಕಿನ ನೋಂದಣಿ ಸಂಖ್ಯೆ / ದಿನಾಂಕ** | : | ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ಪತ್ರ ನಂ. 201/DR 53-54 ದಿನಾಂಕ 01.06.1953ರಲ್ಲಿ ನೊಂದಾಯಿಸಲ್ಪಟ್ಟಿದೆ. |
| 4. | **ರಿಸರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್ ಲೈಸನ್ಸ್ ಕ್ರಮಾಂಕ ಹಾಗೂ ದಿನಾಂಕ** | : | ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ನಂ. ಯು.ಬಿ.ಡಿ.ಕೆ.ಎ:738:ಪಿ ದಿನಾಂಕ 10.12.1986 ರಂದು ಅನುಮತಿ ನೀಡಿರುತ್ತಾರೆ. ಶಾಖೆಯನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್‌ನವರು ನಂ. ಯು.ಬಿ.ಡಿ: ಬಿಜಿಬಿಎಲ್: 319 ದಿನಾಂಕ 27.01.1999 ರನ್ವಯ ಪರವಾನಗಿ ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ. |
| 5. | **ಬ್ಯಾಂಕಿನ ಕಾರ್ಯಕ್ಷೇತ್ರ (ಬ್ಯಾಂಕಿನ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)** | : | ಬ್ಯಾಂಕಿನ ಬೈಲಾ ನಂ. 3ರಂತೆ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಗೆ ಒಳಗೊಂಡಿದ್ದು, ಇದರ ವ್ಯಾಪ್ತಿಯಲ್ಲಿ ವಾಸ ಮಾಡುವವರು, ವ್ಯಾಪಾರಸ್ಥರು ಹಾಗೂ ಉದ್ಯೋಗಸ್ಥರು ಸದಸ್ಯರಾಗಲು ಅರ್ಹತೆ ಹೊಂದಿರುತ್ತಾರೆ. |

**(2) ಬ್ಯಾಂಕಿನ ಮುಖ್ಯ ಉದ್ದೇಶಗಳು / ಚಟುವಟಿಕೆಗಳು (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ):**

ಬ್ಯಾಂಕಿನ ಬೈಲಾ ನಂ. 5 ರಲ್ಲಿ ಬ್ಯಾಂಕಿಗೆ ಧ್ಯೇಯ ಮತ್ತು ಉದ್ದೇಶಗಳನ್ನು ಅಳವಡಿಸಿಕೊಂಡು ವ್ಯವಹರಿಸಲಾಗುತ್ತಿದೆ.

**(3) ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31-03-2024 ರಲ್ಲಿದಂತೆ):**

| | | | |
|---|---|---|---|
| 1. | **ಅಧ್ಯಕ್ಷರು** | : | ಶ್ರೀ ಎಸ್.ಕೆ. ಕರಿಯಪ್ಪ ಗೌಡ - ಅವಧಿ 2020-2025 |
| 2. | **ಉಪಾಧ್ಯಕ್ಷರು** | : | ಶ್ರೀ ಟಿ.ಎಸ್. ಗಂಗನರಸಿಂಹಯ್ಯ - ಅವಧಿ 2020-2025 |
| 3. | **ಮುಖ್ಯಕಾರ್ಯನಿರ್ವಹಣಾಧಿಕಾರಿ** | : | ಶ್ರೀ ಜಿ. ಶ್ರೀನಿವಾಸ್ |

**(4) ಶಾಖೆಗಳು ಮತ್ತು ಅವುಗಳ ವಿಳಾಸ:**

| | ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು |
|---|---|---|---|
| 1. | ಮಲ್ಲೇಶ್ವರಂ ಶಾಖೆ (ಕೇಂದ್ರ ಕಛೇರಿ) | ನಂ. 146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003. | ಶ್ರೀ ಎಂ.ಹೆಚ್. ವೆಂಕಟೇಶ್ |
| 2. | ಮೂಡಲಪಾಳ್ಯ ಶಾಖೆ | ನಂ. 26, 1ನೇ ಮುಖ್ಯರಸ್ತೆ, ಮಧುರನಗರ, ಮೂಡಲಪಾಳ್ಯ ಸರ್ಕಲ್ ಹತ್ತಿರ, ಬೆಂಗಳೂರು – 560 072 | ಶ್ರೀ ಬಿ.ಟಿ. ಉಮಾಶಂಕರ್ |

**ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು**

**(5) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ:**

| | ಹೆಸರು | ಹುದ್ದೆ | ಕಛೇರಿ |
|---|---|---|---|
| 1. | ಜಿ. ಶ್ರೀನಿವಾಸ್ | ಮುಖ್ಯಕಾರ್ಯನಿರ್ವಹಣಾಧಿಕಾರಿ | ಕೇಂದ್ರ ಕಛೇರಿ |
| 2. | ಶ್ರೀ ಬಿ.ಟಿ. ಉಮಾಶಂಕರ್ | ಶಾಖಾ ವ್ಯವಸ್ಥಾಪಕರು | ಮೂಡಲಪಾಳ್ಯ ಶಾಖೆ |

**(6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ:**

| | |
|---|---|
| ಲೆಕ್ಕಪರಿಶೋಧಕರ ಹೆಸರು, ಹುದ್ದೆ ಹಾಗೂ ವಿಳಾಸ | CA ರಾಘವೇಂದ್ರ ಪುರಾಣಿಕ್, ಪುರಾಣಿಕ್ ಅಂಡ್ ಹೆಬ್ಬಾರ್ ಚಾರ್ಟರ್ಡ್ ಅಕೌಂಟೆಂಟ್ಸ್, ನಂ. 3, 2ನೇ ಮಹಡಿ, 9ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬಸವನಗುಡಿ, ಬೆಂಗಳೂರು–560 019. |
| ಎಂಪಾನಲ್‌ಮೆಂಟ್ ನಂಬರ್ | F04/03/2013-17:27:56 |
| ಲೆಕ್ಕಪರಿಶೋಧನಾ ಅವಧಿ | ದಿನಾಂಕ 01.04.2022 ರಿಂದ 31.03.2023 ರವರೆಗೆ. |

**(7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ:**

| | |
|---|---|
| ಲೆಕ್ಕಪರಿಶೋಧಕರ ಹೆಸರು, ಹುದ್ದೆ ಹಾಗೂ ವಿಳಾಸ | CA ರವೀಂದ್ರ ಎಸ್. ಕೋರೆ, ಮೆ॥ ಬಿ ಆರ್ ಆರ್ ಅಂಡ್ ಕಂಪನಿ ಚಾರ್ಟರ್ಡ್ ಅಕೌಂಟೆಂಟ್ಸ್, ನಂ. 38, 1ನೇ ಮಹಡಿ, 1ನೇ ಮುಖ್ಯರಸ್ತೆ, ಮಹಾಗಣಪತಿನಗರ, 1ನೇ ಸ್ಟೇಜ್, 6ನೇ ಫೇಸ್, ರಾಜಾಜಿನಗರ, ಬೆಂಗಳೂರು–560 010. |
| ಎಂಪಾನಲ್‌ಮೆಂಟ್ ನಂಬರ್ | F - 18/02/2013 |
| ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | ಆದೇಶ ಸಂಖ್ಯೆ SRCB / 370/2023–24 ದಿನಾಂಕ: 06.12.2023 ರಲ್ಲಿ ನೇಮಕಾತಿ ಆದೇಶ ನೀಡಲಾಗಿದೆ. |
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ: | 04.05.2024 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ: | 03.06.2024 |
| ಲೆ.ಪ.ಗೆ ತೆಗೆದುಕೊಂಡ ದಿನಗಳು | 15 ದಿನಗಳು |

**(8) ಲೆಕ್ಕಪರಿಶೋಧನಾ ವರ್ಗೀಕರಣ:**

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | **'ಎ' ವರ್ಗೀಕರಣ** |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | **'ಎ' ವರ್ಗೀಕರಣ** |

**(9) ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ:**

**1. ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ?**

ಬ್ಯಾಂಕಿನಲ್ಲಿ ಆಂತರೀಕ / ಸಮವರ್ತಿ ಲೆಕ್ಕ ಪರಿಶೋಧನೆಗೆ ಕ್ರಮವಿಟ್ಟಿದ್ದು, ಚಾಟರ್ಡ್ ಅಕೌಂಟೆಂಟ್‌ರವರಿಂದ ಆಂತರೀಕ ಲೆಕ್ಕ ಪರಿಶೋಧನೆ ಮಾಡಿಸಲಾಗುತ್ತಿದೆ.

**2. ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ?**

ತ್ರೈಮಾಸಿಕವಾಗಿ ಲೆಕ್ಕ ಪರಿಶೋಧನೆ ನಡೆಯುತ್ತಿದೆ. ಸದರಿ ವರದಿಗೆ ಅನುಪಾಲನಾ ವರದಿ ನೀಡಲಾಗಿದೆ.

**3. ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು.**

ಗಂಭೀರ ನ್ಯೂನತೆಗಳು ಯಾವುದೂ ಕಂಡುಬಂದಿರುವುದಿಲ್ಲ. ಆದರೂ ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಿದೆ.

1. ನಗದು ಶಿಲ್ಕನ್ನು ನಿಗಧಿತ ಮಿತಿ ಮೀರಿ ಉಳಿಸಿಕೊಳ್ಳಲಾಗಿದೆ.
2. ಸಾಲಗಳ ಸದುಪಯೋಗದ ಬಗ್ಗೆ ಕ್ರಮವಿಡುವುದು.
3 ಕೆಲವು ಲಾಕರ್‌ಗಳ ಬಾಡಿಗೆ ಬಾಕಿ ಉಳಿದಿದ್ದು, ಅದರ ವಸೂಲಾತಿಗೆ ಕ್ರಮವಿಡುವುದು.
4. ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲಗಳ ತ್ವರಿತ ವಸೂಲಾತಿಗೆ ಅಗತ್ಯ ಕ್ರಮವಿಡಬೇಕಾಗಿದೆ.

**4. ಅವುಗಳಿಗೆ ಬ್ಯಾಂಕ್ ನೀಡಿದ ಅನುಪಾಲನಾ ವರದಿಯ ವಿವರ.**

ಆಂತರಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುವ ನ್ಯೂನತೆಗಳಿಗೆ ಅನುಪಾಲನಾ ವರದಿಯನ್ನು ತಯಾರಿಸಿ ಆಡಿಟ್ ಉಪಸಮಿತಿಯಲ್ಲಿ ಅಂಗೀಕರಿಸಿ ಮುಖ್ಯ ಸಮಿತಿಯಲ್ಲಿ ಪರಿಶೀಲಿಸಲಾಗುತ್ತಿದೆ ಹಾಗೂ ಇದು ಅನುಸರಣೆಯಾಗುತ್ತಿದೆ.

**5. ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?**

ಅಂತಹ ಗಂಭೀರ ನ್ಯೂನತೆಗಳು ಮುಂದುವರೆದಿರುವುದಿಲ್ಲ.

**ಆಂತರಿಕ ಹತೋಟಿ:–**

**ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು / ಆದೇಶ / ಕೈಪಿಡಿಗಳ ಬಗ್ಗೆ.**

ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸಹಕಾರ ಇಲಾಖೆಯು ನೀಡಿರುವ ಮಾರ್ಗ ಸೂಚಿಗಳು / ಆದೇಶ / ಕೈಪಿಡಿಗಳು ಬ್ಯಾಂಕಿನಲ್ಲಿ ಪರಿಶೀಲನೆಗೆ ಲಭ್ಯವಿದ್ದು ಅದರಂತೆ ಲೆಕ್ಕ ಪತ್ರಗಳನ್ನು ನಿರ್ವಹಿಸಲಾಗಿದೆ.

**ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ.**

ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ ಇರುತ್ತದೆ. ದಿನಾಂಕ 31.3.2024ಕ್ಕೆ ಎಲ್ಲಾ ಖಾತೆಗಳ ಕುಳುವಾರು ತಯಾರಿಸಿದ್ದು ತಾಳೆಯಿರುತ್ತದೆ. ಎಲ್ಲಾ ಖಾತೆಗಳನ್ನು ಗಣಕಯಂತ್ರದಲ್ಲಿ ನಿರ್ವಹಿಸಿದ್ದು ಲೆಕ್ಕ ಪತ್ರಗಳನ್ನು ಸಮನ್ವಯಗೊಳಿಸಲಾಗುತ್ತಿದೆ.

**ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ / ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ.**

ಎಲ್ಲಾ ಲೆಕ್ಕ ಪತ್ರಗಳನ್ನು ಕಂಪ್ಯೂಟರ್‌ನಲ್ಲಿ ನಿರ್ವಹಿಸಲಾಗಿದ್ದು, ಕುಳುವಾರುಗಳು ತಾಳೆ ಇರುತ್ತದೆ. ಶಾಖಾ ಲೆಕ್ಕಗಳು ಹಾಗೂ ಕೇಂದ್ರ ಕಛೇರಿ ಲೆಕ್ಕಗಳನ್ನು ಮಾಹೆಯಾನ ಸಮನ್ವಯಗೊಳಿಸಲಾಗುತ್ತಿದೆ

**ಜಾಗರೂಕತೆ:–**

**ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ.**

ವರದಿ ಸಾಲಿನಲ್ಲಿ ಯಾವುದೇ ಮೋಸ ವಂಚನೆ, ಹಣ ದುರುಪಯೋಗದ ಪ್ರಕರಣಗಳು ಯಾವುದು ಇರುವುದಿಲ್ಲ.

**ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ**

ಅನ್ವಯಿಸುವುದಿಲ್ಲ.

**ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ**

ದಿನಾಂಕ 31.3.2024 ಅಂತ್ಯಕ್ಕೆ ಅಮಾನತ್ತಿನ ಖಾತೆಯಲ್ಲಿ ರೂ. 16,583.00 ಗಳು ಬಾಕಿ ಇದ್ದು ಕುಳುವಾರು ತಾಳೆಯಿರುತ್ತದೆ. DEAF ಖಾತೆಯಲ್ಲಿ ಬರಬೇಕಾದದ್ದು ರೂ. 5,894/– ಇರುತ್ತದೆ. ಅವಧಿ ಮುಗಿದ ಠೇವಣಿಗಳು ರೂ. 87.11 ಲಕ್ಷ ಇದ್ದು ಇದನ್ನು ಸಂಬಂಧಪಟ್ಟವರಿಗೆ ಹಿಂತಿರುಗಿಸಲು / ನವೀಕರಿಸಲು ಕ್ರಮವಿಡುವುದು ಸೂಕ್ತ.

**ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು.**

ಅಸಮಾನ್ಯ ನಮೂದುಗಳು ಯಾವುದು ಇರುವುದಿಲ್ಲ. ಅಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

**ತನಿಖೆ / ಹಿಂದಿನ ತನಿಖೆಯ ದಿನಾಂಕ**

ಭಾರತೀಯ ರಿಸರ್ವ್ ಬ್ಯಾಂಕಿನಿಂದ 31.03.2021ರ ಅಂತ್ಯಕ್ಕೆ ತನಿಖೆ ನಡೆದಿದ್ದು, ಇದಕ್ಕೆ ಬ್ಯಾಂಕಿನಿಂದ ಅನುಪಾಲನಾ ವರದಿ ನೀಡಲಾಗಿದೆ.

**(10) ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿರುವ ಬಗ್ಗೆ ವಿವರ.**

| | | |
|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಹೌದು |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಇಲ್ಲ |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು |
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಇಲ್ಲ |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | ಇಲ್ಲ |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | ಹೌದು |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; | ಹೌದು |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | ಇಲ್ಲ |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು |

**(11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ**
**ಬ್ಯಾಂಕ್ ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ:**

1. **ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?**
   ಹಿಂದಿನ ಸಾಲಿನ ವರದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆ.

2. **ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ ದಿನಾಂಕ:**
   ಬ್ಯಾಂಕಿನ ಪತ್ರ ಸಂಖ್ಯೆ SRCB / 173-175 / 2023 - 2024, ದಿನಾಂಕ 31-07-2023ರಲ್ಲಿ ಸಲ್ಲಿಸಲಾಗಿದೆ.

3. **ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ವಿವರಿಸುವುದು.**
   ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಯಾವುದೂ ಮುಂದುವರೆದಿರುವುದಿಲ್ಲ.

**(12) ಸಹಕಾರ ಬ್ಯಾಂಕಿಗೆ / ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು. (ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.):**

1. **ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ.**
   ಬ್ಯಾಂಕಿನಲ್ಲಿ ಅಧಿಕೃತ ಉಪನಿಯಮ, ಸಹಕಾರಿ ಕಾಯ್ದೆ ಹಾಗೂ ನಿಯಮಗಳ ಪ್ರತಿಗಳು ಹಾಗೂ ಬ್ಯಾಂಕಿಂಗ್ ರೆಗ್ಯೂಲೇಷನ್ ಆಕ್ಟ್ 1949 ಪುಸ್ತಕವನ್ನು ಇಟ್ಟು ಕಾಲಕಾಲಕ್ಕೆ ಅನ್ವಯವಾಗುವ ನಿಯಮಗಳನ್ನು ಪಾಲಿಸಿರುತ್ತಾರೆ.

2. **ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?**
   ಅನುಸರಿಸಲಾಗುತ್ತಿದೆ.

3. **ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ.**
   ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ ಬಹುತೇಕ ಆಗುತ್ತಿದೆ.

4. **ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ.**
   ಅಂತಹ ಪ್ರಕರಣಗಳು ಯಾವುದೂ ಕಂಡು ಬಂದಿರುವುದಿಲ್ಲ.

5. **ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ.**
   ಭಾರತೀಯ ರಿಸರ್ವ್ ಬ್ಯಾಂಕಿನಿಂದ 31.03.2021ರ ಅಂತ್ಯಕ್ಕೆ ತನಿಖೆ ನಡೆದಿರುತ್ತದೆ. ಸದರಿ ತನಿಖಾ ವರದಿಯ ನ್ಯೂನತೆಗಳಿಗೆ ಅನುಪಾಲನಾ ವರದಿ ಸಲ್ಲಿಸಲಾಗಿದೆ.

## ಭಾಗ – II

(ಬ್ಯಾಂಕಿನ ವ್ಯಾವಹಾರಿಕ ವಿವರಗಳು)

**(13) ದಿನಾಂಕ 31–03–24 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ:**

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|
| | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 8019 | 7961 | 1562 | 1579 |
| ಹೊಸದಾಗಿ ಸದಸ್ಯತ್ವ ಪಡೆದವರು | 115 | 339 | 45 | – |
| ಸದಸ್ಯತ್ವದಿಂದ ಕಡಿಮೆ ಆದವರು | 173 | 186 | 28 | 31 |
| ಸಾಲಾಖೈರಿಗೆ ಇರುವ ಸದಸ್ಯರು | 7961 | 8114 | 1579 | 1548 |

| | |
|---|---|
| ಸದಸ್ಯತ್ವದ ಬಗ್ಗೆ ವಿಮರ್ಷೆ | 1. ಕಳೆದ ಸಾಲಿಗೆ ಹೋಲಿಸಿದಾಗ ಸಾಮಾನ್ಯ ಸದಸ್ಯರ ಸಂಖ್ಯೆಯಲ್ಲಿ ಏರಿಕೆಯಾಗಿರುತ್ತದೆ.<br>2. ಕೆಲವೊಂದು ಸದಸ್ಯರಿಗೆ ಷೇರು ಪತ್ರಗಳು ಮತ್ತು ಗುರುತಿನ ಚೀಟಿ ವಿತರಣೆಗಾಗಿ ಬಾಕಿ ಇದ್ದು, ಇವುಗಳನ್ನು ವಿತರಣೆ ಮಾಡಲು ಕ್ರಮವಿಡುವುದು.<br>ಸದಸ್ಯರ ನಾಮಿನಿಗಳ ವಿವರಗಳನ್ನು ಗಣಕ ಯಂತ್ರದಲ್ಲಿ ನೊಂದಣಿ ಮಾಡಿರುತ್ತಾರೆ. ಬ್ಯಾಂಕಿನ ಸಹಸದಸ್ಯರ ಸಂಖ್ಯೆಯು ಸಾಮಾನ್ಯ ಸದಸ್ಯರ ಸಂಖ್ಯೆಯ ಶೇ. 15 ರಷ್ಟು ಮೀರಿದ್ದು, ಸಹ ಸದ್ಯಸರನ್ನು ಸಾಮಾನ್ಯ ಸದಸ್ಯರನ್ನಾಗಿ ಪರಿವರ್ತಿಸಲು ಕ್ರಮವಿಡಲು ಸೂಚಿಸಲಾಗಿದೆ. |
| ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ | ವರದಿ ಸಾಲಿನಲ್ಲಿ ಕಟ್ಟುನಿಟ್ಟಾಗಿ KYC ದಾಖಲಾತಿಗಳನ್ನು ಪಡೆಯಲಾಗಿದೆ. ಹಳೆಯ KYC ನೀಡದ ಖಾತೆಗಳಲ್ಲಿ ವ್ಯವಹರಿಸಲು ನಿರ್ಬಂಧ ಹೇರಿ KYC ನೀಡಿದ ನಂತರ ವ್ಯವಹರಿಸಲು ಅವಕಾಶ ನೀಡಲಾಗುತ್ತಿದೆ. KYC ದಾಖಲೆಗಳನ್ನು ನೀಡಲು ಪ್ರತೀವರ್ಷ ವಾರ್ಷಿಕ ಮಹಾಸಭೆಯ ಸೂಚನಾಪತ್ರದ ಮೂಲಕ ಹಾಗೂ ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುತ್ತಿದೆ. ಲೆಕ್ಕ ಪರಿಶೋಧನಾ ಅವಧಿಯಲ್ಲಿ ಆಯ್ದು ಅರ್ಜಿಗಳನ್ನು ಪರಿಶೀಲಿಸಲಾಗಿದೆ. |

**ಬ್ಯಾಂಕಿನ ಸದಸ್ಯರೊಡನೆ ಕೈಕೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :**

**1. ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ.**

ಬ್ಯಾಂಕಿನಲ್ಲಿ ಸಾಮಾನ್ಯ ಸದಸ್ಯರು, ಸಹಸದಸ್ಯರು ಹಾಗೂ ನಾಮ ಮಾತ್ರ ಸದಸ್ಯರು ಇದ್ದು, ಎಲ್ಲಾ ರೀತಿಯ ವರ್ಗಗಳ ಜನರಿಗೆ ಸದಸ್ಯತನ ನೀಡಿ ವ್ಯವಹರಿಸಲಾಗುತ್ತಿದೆ. ಠೇವಣಿ ಸಂಗ್ರಹಣೆ, ಲಾಕರ್ ಸೌಲಭ್ಯ, ಆಧಾರ ಮತ್ತು ಆಧಾರ ರಹಿತ ಸಾಲ ಮತ್ತು ಮುಂಗಡ ಇನ್ನಿತರ ಎಲ್ಲಾ ಸೌಲಭ್ಯವನ್ನು ನೀಡಲಾಗುತ್ತದೆ.

**2. ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ.**

KYC ದಾಖಲೆ ಪಡೆದು ಸದಸ್ಯೇತರರಿಗೆ SB ಖಾತೆ, ಚಾಲ್ತಿ ಖಾತೆ, ಠೇವಣಿ ಖಾತೆಗಳ, ಲಾಕರ್ ಸೌಲಭ್ಯ ಹಾಗೂ ಚಿನ್ನದ ಸಾಲದ ಸೌಲಭ್ಯ ನೀಡಿ ವ್ಯವಹರಿಸಲಾಗುತ್ತಿದೆ.

**3. ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು.**

ಬ್ಯಾಂಕಿನ ಸದಸ್ಯರು ಹಾಗೂ ಸದಸ್ಯೇತರರು ಬ್ಯಾಂಕಿನ ವ್ಯಾಪ್ತಿಯಲ್ಲಿಯೇ ಇದ್ದು ವ್ಯವಹರಿಸುತ್ತಿದ್ದು ಕಾರ್ಯವ್ಯಾಪ್ತಿ ಮೀರಿ ವ್ಯವಹಾರ ನಡೆಸಿರುವುದು ಕಂಡು ಬಂದಿರುವುದಿಲ್ಲ.

**4. ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ.**

ಬ್ಯಾಂಕು ದಿನಾಂಕ 31–3–2024ಕ್ಕೆ ಒಟ್ಟು ರೂ 484.33 ಲಕ್ಷ ಪಾವತಿಯಾದ ಷೇರು ಬಂಡವಾಳ ಹೊಂದಿರುತ್ತದೆ. ಸಾಮಾನ್ಯ ಸದಸ್ಯರ ಹಾಗೂ ಸಹ ಸದಸ್ಯರ ಷೇರು ಷೆಡ್ಯೂಲ್ ತಯಾರಿಸಿದ್ದು ತಾಳೆ ಇರುತ್ತದೆ. ಬ್ಯಾಂಕಿನ ಷೇರು ಮುಖ ಬೆಲೆ ರೂ. 100/–ಗಳಾಗಿರುತ್ತದೆ.

**(14) ಷೇರು ಬಂಡವಾಳ ಬಗ್ಗೆ ವಿಮರ್ಷೆ:**

**1. ಅಧಿಕೃತ ಷೇರು ಬಂಡವಾಳ :**

ಸದಸ್ಯತ್ವ ಹೊಂದಿರುವವರು ಕನಿಷ್ಠ 10 ಷೇರುಗಳನ್ನು ಹೊಂದಿರತಕ್ಕದೆಂದಿರುತ್ತದೆ. ಬ್ಯಾಂಕಿನ ಬೈಲಾ ನಂ. 10ರಂತೆ ಪ್ರತಿ ಷೇರಿನ ಮುಖಬೆಲೆ ರೂ. 100/– ಆಗಿದ್ದು ಅದರಂತೆ ದಿನಾಂಕ 31–03–2024ರ ಅಂತ್ಯಕ್ಕೆ ರೂ. 4,84,32,900/– ರಷ್ಟು ಷೇರು ಸಂಗ್ರಹಣೆಯಾಗಿರುತ್ತದೆ.

ದಿನಾಂಕ 31–03–2024 ಕ್ಕೆ ಇರುವಂತೆ ಬ್ಯಾಂಕಿಗೆ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.

| ಷೇರು ಬಂಡವಾಳ | ಸಾಮಾನ್ಯ ಷೇರು | | ಸಹ ಸದಸ್ಯರ ಷೇರು | |
|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | 443.27 | 455.49 | 49.11 | 48.05 |
| ಪ್ರಸಕ್ತ ಸಾಲಿನಲ್ಲಿನ ಜಮಾ | 9.76 | 5.45 | 0.33 | 2.70 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | 17.16 | 17.67 | 0.98 | 1.64 |
| ಸಾಲಾಖೈರಿಗೆ ಇದ್ದಂತೆ | 435.87 | 443.27 | 48.46 | 49.11 |

**ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**

ಸರಕಾರದಿಂದ ಯಾವುದೇ ಷೇರು ಬಂಡವಾಳವನ್ನು ಪಡೆದಿರುವುದಿಲ್ಲ.

**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**

ದಿನಾಂಕ 31–03–2024ರ ಅಂತ್ಯಕ್ಕೆ ಬ್ಯಾಂಕು ರೂ. 4,84,32,900/– ರಷ್ಟು ಷೇರು ಬಂಡವಾಳವನ್ನು ಹೊಂದಿರುತ್ತದೆ. ಪ್ರತಿ ಷೇರಿಗೆ ಬ್ಯಾಂಕಿನ ಬೈಲಾ ನಂ. 10ರಂತೆ ರೂ 100/–ರಂತೆ ಷೇರು ಸಂಗ್ರಹಣೆ ಮಾಡಲಾಗಿದೆ. ಸದಸ್ಯರ ಹಾಗೂ ಸಹ ಸದಸ್ಯರ ಕುಳುವಾರು ಪಟ್ಟಿ ಬರೆದಿದ್ದು ಪೂರ್ಣ ವಿವರಗಳಿಂದ ಕೂಡಿರುತ್ತದೆ ಹಾಗೂ ಷೇರು ಪ್ರಮಾಣ ಪತ್ರವನ್ನು ಕೆಲವು ಸದಸ್ಯರಿಗೆ ವಿತರಿಸಲು ಬಾಕಿ ಇರುತ್ತದೆ. ಇದನ್ನು ವಿತರಿಸಲು ಸೂಚಿಸಲಾಗಿದೆ. ಸದಸ್ಯರ ರಿಜಿಸ್ಟರ್‌ನಲ್ಲಿ ಸದಸ್ಯರ/ಸಹಸದಸ್ಯರ ಪೂರ್ಣ ವಿವರಗಳನ್ನು ಬರೆದಿರುತ್ತಾರೆ. ಹಾಗೂ ಗಣಕ ಯಂತ್ರದಲ್ಲಿಯೂ ಸದಸ್ಯರ ವಿವರಗಳನ್ನು ನಮೂದಿಸಿರುತ್ತಾರೆ.

**ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ? ದಿನಾಂಕ :**

31.03.2023ಕ್ಕೆ ಸದಸ್ಯರ ಕುಳುವಾರು ಪಟ್ಟಿ ತಯಾರಿಸಿದ್ದು ಪೂರ್ಣ ವಿವರಗಳಿಂದ ಕೂಡಿದ್ದು ತಾಳೆ ಇರುತ್ತದೆ.

**(15) ಮೀಸಲು ನಿಧಿ ಮತ್ತು ಇತರೆ ನಿಧಿಗಳು :**

1. **ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣೆಯ ಮೇಲಿನ ಬಡ್ಡಿ ಸಾಲಾಖೈರಿಗೆ ಸಂಘಕ್ಕೆ ಜಮಾ. ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.**

   ದಿನಾಂಕ 31–03–2024ರ ಅಂತ್ಯಕ್ಕೆ ಆಪದ್ದನ ನಿಧಿ ಖಾತೆಯಲ್ಲಿ ರೂ 733.44 ಲಕ್ಷ ಇದ್ದು, ಬ್ಯಾಂಕಿನ ಮೀಸಲು ನಿಧಿಯನ್ನು ಪ್ರತ್ಯೇಕವಾಗಿ ಕ್ರಮಬದ್ದವಾಗಿ ಅಪೆಕ್ಸ್ ಬ್ಯಾಂಕಿನಲ್ಲಿ ರೂ. 447.10 ಲಕ್ಷ, ಸರ್ಕಾರಿ ಭದ್ರತೆಯಲ್ಲಿ ರೂ. 196.36 ಲಕ್ಷ ಮತ್ತು ಬಿಡಿ ಮತ್ತು ಬಿಆರ್‌ಡಿಸಿಸಿ ಬ್ಯಾಂಕಿನಲ್ಲಿ ರೂ 94.87 ಲಕ್ಷ ಹೂಡಿಕೆ ಮಾಡಲಾಗಿದೆ. ಇವುಗಳ ಬಡ್ಡಿ ಬ್ಯಾಂಕಿಗೆ ಕ್ರಮಬದ್ದವಾಗಿ ಜಮಾ ಆಗಿರುತ್ತದೆ. ಸರ್ಕಾರಿ ಭದ್ರತೆಯಲ್ಲಿ ತೊಡಗಿಸಿರುವ ಆಪದ್ದನ ನಿಧಿ ಮೊತ್ತವನ್ನು ಆಪದ್ದನ ನಿಧಿಗಾಗಿ ಇಯರ್ ಮಾರ್ಕ್ ಮಾಡಲಾಗಿದೆ. ಆಪದ್ದನ ನಿಧಿಯನ್ನು ಕೊರತೆ ಆಗದಂತೆ ನಿರ್ವಹಿಸಲಾಗಿದೆ.

2. **ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58 ರ ಅಂಶಗಳನ್ನು ಪಾಲಿಸಲಾಗಿದೆಯೆ?**

   ಪಾಲಿಸಲಾಗಿದೆ.

3. **ಬ್ಯಾಂಕು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.**

   ಆಪದ್ದನ ನಿಧಿಯನ್ನು ಬೇರೆ ವ್ಯವಹಾರಕ್ಕಾಗಿ ಉಪಯೋಗಿಸಿರುವುದಿಲ್ಲ.

4. **ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.**

   ಅನ್ವಯಿಸುವುದಿಲ್ಲ.

5. **ಬ್ಯಾಂಕು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಬ್ಯಾಂಕಿನ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4) (ಬಿ) ಯ ಉಲ್ಲಂಘನೆಯಾಗಿದೆಯೇ?**

   ಬ್ಯಾಂಕು ಶಿಕ್ಷಣ ನಿಧಿ ಮೊತ್ತವನ್ನು ಕ್ರಮಬದ್ಧವಾಗಿ ಪಾವತಿ ಮಾಡಿ. ನಂತರ ಸದಸ್ಯರಿಗೆ ಡಿವಿಡೆಂಡ್ ವಿತರಣೆ ಮಾಡಿದೆ.

**(16) ಹೊರಗಿನಿಂದ ಪಡೆದ ಸಾಲಗಳು:**

ಬ್ಯಾಂಕು ಹೊರಗಿನಿಂದ ಯಾವುದೇ ರೀತಿಯ ಸಾಲವನ್ನು ಪಡೆದಿರುವುದಿಲ್ಲ.

**(17) ಠೇವಣಿಗಳು:**

**1. ಬ್ಯಾಂಕು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ.**

ಬ್ಯಾಂಕಿನ ಬೈಲಾ ನಂ. 7ರ ಪ್ರಕಾರ ಮತ್ತು ಸಹಕಾರ ಸಂಘಗಳ ಅಧಿನಿಯಮ 59ರ ಪ್ರಕಾರ ವಿವಿಧ ಠೇವಣಿ ಸಂಗ್ರಹಣೆ ಆಗಿರುತ್ತದೆ ಹಾಗೂ ಆಡಳಿತ ಮಂಡಳಿಯವರು ಆರ್ಥಿಕತೆಗೆ ಅನುಗುಣವಾಗಿ ಕಾಲಕಾಲಕ್ಕೆ ನಿರ್ಧರಿಸುವ ಬಡ್ಡಿದರ, ಅವಧಿ ಇತ್ಯಾದಿಗಳನ್ವಯ ಬ್ಯಾಂಕಿನಲ್ಲಿ ಠೇವಣಿ ಸಂಗ್ರಹಿಸಲಾಗಿದೆ.

**2. ಬ್ಯಾಂಕು ಸಂಗ್ರಹಣೆ ಮಾಡಿರುವ ವಿವಿದ ಠೇವಣಿಗಳ ವಿವರಗಳು.**

| ಠೇವಣಿ ವಿವರಗಳು | ಆರಂಭ ಬಾಕಿ | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಅಂತರ ಲಕ್ಷಗಳಲ್ಲಿ |
|---|---|---|---|---|---|
| ಖಾಯಂ ಠೇವಣಿ | 5761.38 | 4947.67 | 5387.97 | 5321.08 | 440.30 – |
| ಕ್ಯಾಷ್ ಸರ್ಟಿಫಿಕೇಟ್ | 2472.60 | 1787.61 | 1971.75 | 2288.46 | 184.14 – |
| ರೆಕರಿಂಗ್ ಠೇವಣಿ | 304.56 | 154.70 | 153.64 | 305.62 | 1.06 + |
| ಅವಧಿ ಮುಗಿದ ಠೇವಣಿ | 94.38 | 1348.70 | 1355.97 | 87.11 | 7.27 – |
| ಶ್ರೀರಾಮ ಪ್ರಿಯದರ್ಶಿನಿ ಠೇವಣಿ | 2637.68 | 2124.35 | 2160.22 | 2601.81 | 35.87 – |
| ಉಳಿತಾಯ ಠೇವಣಿ | 3013.24 | 15384.46 | 15194.48 | 3203.22 | 189.98 + |
| ಚಾಲ್ತಿ ಠೇವಣಿ | 34.04 | 240.54 | 243.29 | 31.29 | 2.75 – |
| ಸಿಬ್ಬಂದಿ ಭದ್ರತಾ ಠೇವಣಿ | 7.05 | 0.12 | 0.34 | 6.83 | 0.22 – |
| ಲಾಕರ್ ಭದ್ರತಾ ಠೇವಣಿ | 19.53 | 21.02 | 21.01 | 19.54 | 0.01 + |
| **ಒಟ್ಟು ಮೊತ್ತ** | **14344.46** | | | **13864.96** | |

**ಒಟ್ಟು ಠೇವಣಿಗಳ ಕಳೆದ 02 ವರ್ಷಗಳ ಅಂಕಿ ಗಳೊಂದಿಗೆ ತುಲನಾತ್ಮಕ ವಿವರ:**
**ಠೇವಣಿಗಳು: ಬ್ಯಾಂಕ್ ಪಡೆದ ವಿವಿಧ ರೀತಿಯ ಠೇವಣಿಗಳ ಬಗ್ಗೆ ವಿವರಗಳು :–**

| ಠೇವಣಿ ವಿವರ | 31.3.2022ಕ್ಕೆ | 31.3.2023ಕ್ಕೆ | 31.3.2024ಕ್ಕೆ |
|---|---|---|---|
| ಖಾಯಂ ಠೇವಣಿ | 53,65,17,226.00 | 57,61,37,598.00 | 53,21,07,957.00 |
| ಕ್ಯಾಷ್ ಸರ್ಟಿಫಿಕೇಟ್ | 24,17,69,082.00 | 24,72,60,119.00 | 22,88,45,927.00 |
| ರೆಕರಿಂಗ್ ಠೇವಣಿ (ಆರ್.ಡಿ) | 3,00,49,078.00 | 3,04,55,837.00 | 3,05,61,950.20 |
| ಅವಧಿ ಮುಗಿದ ಠೇವಣಿ | 1,34,37,056.50 | 94,38,228.50 | 87,10,583.15 |
| ಶ್ರೀರಾಮ ಪ್ರಿಯದರ್ಶಿನಿ ಠೇವಣಿ | 26,19,13,491.00 | 26,37,68,155.00 | 26,01,80,589.00 |
| ಉಳಿತಾಯ ಠೇವಣಿ | 31,15,62,536.21 | 30,13,24,415.00 | 32,03,22,299.89 |
| ಚಾಲ್ತಿ ಠೇವಣಿ | 31,12,917.66 | 34,03,929.27 | 31,28,525.32 |
| ಸಿಬ್ಬಂದಿ ಭದ್ರತಾ ಠೇವಣಿ | 19,51,000.00 | 7,04,585.00 | 6,84,585.00 |
| ಲಾಕರ್ ಭದ್ರತಾ ಠೇವಣಿ | 6,95,637.00 | 19,53,000.00 | 19,54,000.00 |
| **ಒಟ್ಟು ಮೊತ್ತ** | **1,40,10,08,024.37** | **1,43,44,45,866.77** | **1,38,64,96,416.56** |

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಷೆ :–**

ಎ) ಹಿಂದಿನ ಸಾಲಾಖೈರಿಗೆ ಲಕ್ಷ 14344.46 ರೂ.ಗಳ ವಿವಿಧ ಠೇವಣಾತಿಗಳು ಇದ್ದು ಪ್ರಸಕ್ತ ಸಾಲಿನ ಅಂತ್ಯಕ್ಕೆ ರೂ. 13864.96 ಲಕ್ಷ ಠೇವಣಿ ಇರುತ್ತದೆ. ಕಳೆದ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಠೇವಣಿ ಸಂಗ್ರಹಣೆ ಪ್ರಗತಿ ಕಡಿಮೆ ಇರುತ್ತದೆ ಕಡಿಮೆ ದರದ ಠೇವಣಿಗಳಾದ ಉಳಿತಾಯ ಖಾತೆ ಠೇವಣಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ. 3203.22 ಲಕ್ಷ ಸಂಗ್ರಹಣೆಯಾಗಿದೆ. ಹಾಗೂ ಚಾಲ್ತಿ ಖಾತೆ ಠೇವಣಿಯಲ್ಲಿ ರೂ. 31.29 ಲಕ್ಷದಷ್ಟು ಸಂಗ್ರಹಣೆಯಾಗಿದೆ. ಬ್ಯಾಂಕು ಕಡಿಮೆ ದರದ ಠೇವಣಿಗಳಾದ ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆ ಠೇವಣಿಯ ಮೊತ್ತವನ್ನು ಹೆಚ್ಚು ಸಂಗ್ರಹಿಸುವುದು ಸೂಕ್ತ. ಉಳಿತಾಯ ಖಾತೆಗಳಲ್ಲಿ 3 ವರ್ಷಕ್ಕೂ ಹೆಚ್ಚು ಕಾಲ ವ್ಯವಹಾರವಿಲ್ಲದಿರುವ ಖಾತೆಗಳನ್ನು Inoperative ಖಾತೆಗೆ ವರ್ಗಾವಣೆ ಮಾಡಿ ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ. 10 ವರ್ಷಕ್ಕೆ ಮೇಲ್ಪಟ್ಟು ಸ್ಥಗಿತಗೊಂಡಿರುವ ಠೇವಣಿ ಖಾತೆಗಳನ್ನು Pay Order / DD ಗಳನ್ನು ಆರ್.ಬಿ.ಐ.ನ DEAF ಖಾತೆಗೆ ಮಾಹೆಯಾನ ವರ್ಗಾಯಿಸಲಾಗುತ್ತಿದೆ. ಆಯ್ದ ಕೆಲವು ಠೇವಣಿ ಖಾತೆಗಳಲ್ಲಿ ಹಾಗೂ ಉಳಿತಾಯ ಖಾತೆಗಳಲ್ಲಿ ಪರೀಕ್ಷಿಸಿದ್ದು ಪಾವತಿಸಿರುವ ಬಡ್ಡಿಯು ಕ್ರಮವಾಗಿದೆ. ಆಯ್ದ ಕೆಲವು ಖಾತೆಗಳನ್ನು ಪರೀಕ್ಷಿಸಲಾಗಿ ಪಡೆದಿರುವ KYC ದಾಖಲಾತಿಗಳು ಕ್ರಮವಾಗಿದೆ. ವಾಯ್ದೆಮುಗಿದ ಠೇವಣಿಗಳನ್ನು Auto Renewal ಸೌಲಭ್ಯದಡಿಯಲ್ಲಿ ನವೀಕರಣ ಮಾಡುವುದು.

ಬಿ) ಠೇವಣಿ ವಿಮಾ ಕಾರ್ಪೊರೇಷನ್‌ಗೆ ಬ್ಯಾಂಕು ನಿಯಮಿತವಾಗಿ ಪ್ರೀಮಿಯಂ ಪಾವತಿಸುತ್ತಿದ್ದು, ಠೇವಣಿಗಳ ಮೇಲೆ (ಐದು ಲಕ್ಷದವರೆಗೆ ಬಡ್ಡಿ ಸೇರಿ) ವಿಮೆ ರಕ್ಷಣೆ ಪಡೆಯಲಾಗಿದೆ. ವರದಿ ಸಾಲಿನಲ್ಲಿ ರೂ. 18.55 ಲಕ್ಷ ಪ್ರೀಮಿಯಂ ಪಾವತಿಸಲಾಗಿದೆ.

ಸಿ) ರೂ. 10 ಲಕ್ಷ ಮೇಲ್ಪಟ್ಟು ನಗದು ವ್ಯವಹಾರಗಳ ಬಗ್ಗೆ ತಃಖ್ತೆಗಳನ್ನು ಕಾಲಕಾಲಕ್ಕೆ ಫೈನಾನ್ಸ್ ಇಂಟೆಲಿಜೆನ್ಸ್ ಯೂನಿಟ್, ನವದೆಹಲಿ ಇವರಿಗೆ ಸಲ್ಲಿಸುತ್ತಿದ್ದಾರೆ.

ಡಿ) ದಿನಾಂಕ 31.3.2024ಕ್ಕೆ ಕ್ರೆಡಿಟ್ ಡೆಪಾಸಿಟ್ ರೇಷಿಯೋ ಶೇ. 59.19% ಇದ್ದು, ಇದು ಆರ್.ಬಿ.ಐ.ನ ಸೂಕ್ತಮಟ್ಟವಾದ ಶೇ. 70 ಕ್ಕಿಂತ ಕಡಿಮೆ ಇರುತ್ತದೆ.

ಇ) ಠೇವಣಿಗಳ ಮೇಲೆ ಸರಾಸರಿ ವೆಚ್ಚ ಶೇ. 5.95% ರಷ್ಟಿರುತ್ತದೆ. ಠೇವಣಿ ವೆಚ್ಚ ಹೆಚ್ಚಾದಂತೆಲ್ಲಾ ಬ್ಯಾಂಕಿಗೆ ಆರ್ಥಿಕ ಹೊರೆ ಜಾಸ್ತಿಯಾಗಲಿದ್ದು ಈ ಬಗ್ಗೆ ಗಮನ ಹರಿಸುವುದು ಹಾಗೂ ಠೇವಣಿಗಳ ಒಳಹರಿವನ್ನು ಅನುಸರಿಸಿ ಠೇವಣಿ ಬಡ್ಡಿದರವನ್ನು ಆಗಾಗ್ಗೆ ಪರಿಷ್ಕರಿಸುವುದು.

**3. ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ?**

ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆ. ಇಲ್ಲಿಯವರೆವಿಗೂ ಸದಸ್ಯರಲ್ಲದವರಿಂದ ರೂ. 31.03 ಕೋಟಿ ಠೇವಣಿ ಸಂಗ್ರಹಿಸಲಾಗಿದೆ.

**4. ಠೇವಣಿಗಳ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ**

ಆಡಳಿತ ಮಂಡಳಿಯ ತೀರ್ಮಾನಕ್ಕೆ ಅನುಗುಣವಾಗಿ ಠೇವಣಿಗಳ ಮೇಲಿನ ಬಡ್ಡಿಯನ್ನು ಆಗಾಗ್ಗೆ ಪರಿಷ್ಕರಿಸಿದ್ದು, ರೂ. 825.59 ಲಕ್ಷ ಠೇವಣಿಗಳ ಮೇಲೆ ಬಡ್ಡಿ ಪಾವತಿ ಮಾಡಲಾಗಿದೆ.

**5. ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ?**

ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆ.

**6. ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ.**

ಠೇವಣಿಗಳ ಮೇಲೆ ಕ್ರಮಬದ್ಧವಾಗಿ ಬಡ್ಡಿ ಪಾವತಿ ಮಾಡಲಾಗಿದೆ. ಬಾಕಿ ಬಡ್ಡಿ ಪಾವತಿಸಲು ರೂ. 87.60 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದೆ.

**7. ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ?**

ಬ್ಯಾಂಕಿನಲ್ಲಿ ಪಿಗ್ಮಿ ಠೇವಣಿಯ ವ್ಯವಹಾರ ಇರುವುದಿಲ್ಲ.

**8. ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್.**

ಅನ್ವಯಿಸುವುದಿಲ್ಲ.

**9. ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ?**

ಆಧಾಯ ತೆರಿಗೆ ನಿಯಮಗಳನ್ನು ಪಾಲಿಸಲಾಗಿದೆ.

**10. ಅನಿಶ್ಚಿತ ಬರತಕ್ಕ ಬಿಲ್ಲುಗಳು :**

ದಿನಾಂಕ : 31.03.2024ಕ್ಕೆ RBIನ DEAF ಖಾತೆಗೆ ವರ್ಗಾಯಿಸಿರುವ ಒಟ್ಟು ಮೊತ್ತ ರೂ. 11,04,813.00 ಇರುತ್ತದೆ.

**11. ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRR ಗಳ ನಿರ್ವಹಣೆ-ಶಾಖೆಗಳ ವಾರದ ಆಖೈರದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದದಾಖಲೆಗಳನ್ನು ನಿರ್ವಹಿಸಲಾಗಿದೆಯೇ?**

ಬ್ಯಾಂಕು ತಾನು ಹೊಂದಿರುವ NDTL ಅನುಸರಿಸಿ RBI ನಿಗಧಿಸಿರುವ ಪ್ರಮಾಣದಲ್ಲಿ ನಗದು ಮೀಸಲಾತಿ (CRR) ಹಾಗೂ ಪ್ರವಾಹಿ ಧನ ಮೀಸಲಾತಿ (SLR) ಹೊಂದಿರಬೇಕಾಗಿದ್ದು, ಆಯ್ದ ಕೆಲವು ದಿನಗಳಲ್ಲಿ SLR / CRR ಪರಿಶೀಲಿಸಲಾಗಿ ಈ ಪ್ರಮಾಣವು ಯಾವುದೇ ದಿನದಲ್ಲಿಯೂ ಕೊರತೆಯಾಗಿರುವುದು ಕಂಡುಬಂದಿಲ್ಲ. ಬ್ಯಾಂಕು ಸಹ ಈ ಬಗ್ಗೆ RBI ಗೆ ಕಾಲಕಾಲಕ್ಕೆ ವರದಿಯನ್ನು ಸಲ್ಲಿಸಿದೆ. ಆದರೆ ಕೆಲವೊಂದು ದಿನಗಳಲ್ಲಿ ನಗದು ಮೀಸಲು ಪ್ರಮಾಣ ಮಿತಿಗಿಂತ ಹೆಚ್ಚಿಗೆ ಇರುವುದನ್ನು ಗಮನಿಸಲಾಗಿದೆ. ಹೆಚ್ಚುವರಿ ನಿಧಿಯನ್ನು ಲಾಭದಾಯಕವಾಗಿ ತೊಡಗಿಸಲು ಸೂಚಿಸಲಾಗಿದೆ. SLR / CRR ಸಂಬಂಧ ನಿಗಧಿತ ನಮೂನೆಯಲ್ಲಿ ನಿಯತಕಾಲಿಕೆಗಳನ್ನು ನಿಗಧಿತ ಅವಧಿಯೊಳಗೆ RBI ಗೆ ಸಲ್ಲಿಸಲಾಗಿದೆ.

**12. ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಸರ್ವ್ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕ ತ:ಖ್ತೆಯಲ್ಲಿ ತೋರಿಸಲಾಗಿದೆಯೇ?**

ವರದಿ ಸಾಲಿನಲ್ಲಿ ಎಲ್ಲಾ ದಿನಗಳಲ್ಲಿ CRR ಹಾಗೂ SLR ಅನ್ನು ನಿಗಧಿತ ಪ್ರಮಾಣದಲ್ಲಿ ನಿರ್ವಹಿಸಿದ್ದು, ಯಾವುದೇ ಉಲ್ಲಂಘನೆ ಇರುವುದಿಲ್ಲ. ವರದಿ ಸಾಲಿನಲ್ಲಿ CRR ಮತ್ತು SLR ಗಳನ್ನು ಗರಿಷ್ಠ ಮಿತಿಯಲ್ಲಿ ನಿರ್ವಹಿಸಲಾಗಿದೆ. ಕಾಲಕಾಲಕ್ಕೆ RBI ಗೆ ಅವಶ್ಯಕವಾಗಿ ಕಳುಹಿಸಬೇಕಾದ ತಃಖ್ತೆಗಳನ್ನು ಕಳುಹಿಸಿರುತ್ತಾರೆ.

**13. ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–**

ಠೇವಣಿಗಳಲ್ಲಿ ಗಮನಾರ್ಹ ನ್ಯೂನತೆಗಳು ಕಂಡು ಬಂದಿರುವುದಿಲ್ಲ. ಠೇವಣಿ ಖಾತೆಗಳನ್ನು ತೆರೆಯುವಾಗ KYC ನಿಯಮಗಳನ್ನು ಪಾಲಿಸುತ್ತಿದ್ದು ಕೆಲವೊಂದು ನ್ಯೂನತೆಗಳನ್ನು ಶಾಖೆಗಳಲ್ಲಿಯೇ ಲೆಕ್ಕ ಪರಿಶೋಧನಾ ಅವಧಿಯಲ್ಲಿಯೇ ಸರಿಪಡಿಸಲಾಗಿದೆ. ಮಾರ್ಚ್ ಅಂತ್ಯಕ್ಕೆ ಕುಳುವಾರು ಪಟ್ಟಿ ತಾಳೆಯಾಗಿದ್ದು, Inoperative ಖಾತೆಗಳನ್ನು ಪ್ರತ್ಯೇಕಿಸಲಾಗಿದೆ.

**(18) ಸಹಾಯಧನಗಳು : ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ:**

ಬ್ಯಾಂಕು ರಾಜ್ಯ ಸರ್ಕಾರದಿಂದಾಗಲೀ ಅಥವಾ ಕೇಂದ್ರ ಸರ್ಕಾರದಿಂದಾಗಲೀ ಯಾವುದೇ ಸಹಾಯಧನ ಅಥವಾ ಸಾಲವನ್ನು ಪಡೆದಿರುವುದಿಲ್ಲ.

**(19) ಇತರೆ ಜವಾಬ್ದಾರಿಗಳು:**

| ವಿವರ | ಮೊತ್ತ ಲಕ್ಷಗಳಲ್ಲಿ |
|---|---|
| ಪಡೆಯದ ಡಿವಿಡೆಂಡ್ | 3.45 |
| ಅಮಾನತ್ತು | 0.17 |
| ನೀರು ಮತ್ತು ಬೆಳಕು ಹಾಗೂ ದೂರವಾಣಿ | 0.28 |
| ಆಡಿಟ್ ಫೀ ಅವಕಾಶ | 2.81 |
| ಪೇ ಆರ್ಡರ್ | 35.56 |
| GST ಪಾವತಿಸಬೇಕಾಗಿರುವುದು | 0.35 |
| ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಪಾವತಿಸಬೇಕಾದದ್ದು | 17.50 |
| ಸಿಬ್ಬಂದಿ ಗಳಿಕೆ ರಜೆ & DA ಪಾವತಿಸಬೇಕಾಗಿರುವುದು | 14.74 |
| ಆದಾಯ ತೆರಿಗೆ ಪಾವತಿಸಬೇಕಾಗಿರುವುದು | 1.70 |

ಮೇಲ್ಕಂಡಂತೆ ದಿ. 31–03–2024ರ ಅಂತ್ಯಕ್ಕೆ ಇತರೆ ಜವಾಬ್ದಾರಿಯಲ್ಲಿ ಪಾವತಿಸಲು ಬಾಕಿ ಇರುತ್ತದೆ.

**(20) ಲಾಭ ವಿಂಗಡಣೆ:**

**ಹಿಂದಿನ ಸಾಲಿನ ಕ್ರೋಢೀಕೃತ ಲಾಭ.**

ಹಿಂದಿನ ಸಾಲಿನ ನಿವ್ವಳ ಲಾಭ ರೂ. 1,04,65,190.55 ಆಗಿರುತ್ತದೆ.

**ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮದನ್ವಯ ಮಾಡಿಕೊಳ್ಳಲಾಗಿದೆಯೇ?**

ಲಾಭ ವಿಂಗಡನೆಯು ವಾರ್ಷಿಕ ಮಹಾಸಭೆಯ ಒಪ್ಪಿಗೆಯಂತೆ ಮಾಡಲಾಗಿದೆ.

**ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ?**

ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆ.

**ವಿತರಣೆಯಾಗದ ಲಾಭಾಂಶದ ಮೊತ್ತ**

ಹಿಂದಿನ ಸಾಲುಗಳಿಂದ ವಿತರಣೆಯಾಗದ ಲಾಭಾಂಶ ಯಾವುದೂ ಇರುವುದಿಲ್ಲ ಆದರೆ ಪಡೆಯದ ಡಿವಿಡೆಂಡ್ ಖಾತೆಯಲ್ಲಿ ರೂ. 3.45 ಲಕ್ಷ ಇರುತ್ತದೆ

**ಮೂರು ವರ್ಷ ಮೀರಿದ ಪಡೆಯದ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿಡಲಾಗಿದೆಯೆ ?**

ಮೂರು ವರ್ಷ ಮೀರಿದ ಪಡೆಯದ ಡಿವಿಡೆಂಡ್ ಮೊತ್ತವನ್ನು ಆಪದ್ದನ ನಿಧಿಗೆ ವರ್ಗಾಯಿಸಲಾಗುತ್ತಿದೆ.

**(21) ನಗದು ಶಿಲ್ಕು ಪರಿಶೀಲನೆ:**

**ದಿನಾಂಕ 31.3.2024ಕ್ಕೆ ನಗದು ಪರಿಶೀಲನಾ ವಿವರ ಈ ಕೆಳಕಂಡಂತಿದೆ.**

ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ರೂ. 65,11,780.00 ಮತ್ತು ಶಾಖೆಯಲ್ಲಿ ರೂ. 19,67,043.00 ಹಾಗೂ ATM ನಲ್ಲಿ ರೂ. 5,42,400.00 ಇದ್ದು, ದಿನಾಂಕ 31.03.2024ಕ್ಕೆ ಬ್ಯಾಂಕು ಮತ್ತು ಅದರ ಶಾಖೆ ಹೊಂದಿರುವ ನಗದು ಶಿಲ್ಕು ರೂ. 90.21 ಲಕ್ಷ ಇರುತ್ತದೆ. ನಗದು ಶಿಲ್ಕನ್ನು ವ್ಯವಸ್ಥಾಪಕರು ಹಾಗೂ CEOರವರು ಭೌತಿಕವಾಗಿ ಪರಿಶೀಲಿಸಿ ದೃಢೀಕರಿಸಿರುತ್ತಾರೆ.

ಲೆಕ್ಕ ಪರಿಶೋಧನಾ ಅವಧಿಯಲ್ಲಿ ಲೆಕ್ಕ ಪರಿಶೋಧನೆ ಕೈಗೊಂಡ ಲೆಕ್ಕಪರಿಶೋಧಕರು ಬ್ಯಾಂಕಿನ ಪ್ರಧಾನ ಕಚೇರಿ ಮತ್ತು ಮೂಡಲಪಾಳ್ಯ ಶಾಖೆಯಲ್ಲಿ ನಗದು ಶಿಲ್ಕು ಪರಿಶೀಲಿಸಿದ್ದು, ಅದರ ವಿವರ ಈ ಕೆಳಕಂಡಂತಿರುತ್ತದೆ.

| ಶಾಖೆಯ ಹೆಸರು | ನಗದು ಶಿಲ್ಕು ಪರಿಶೀಲಿಸಿದ ದಿನಾಂಕ | ಪರಿಶೀಲಿಸಿದ ನಗದು |
|---|---|---|
| ಪ್ರಧಾನ ಕಚೇರಿ | 08–05–2024 | 72,29,710.00 |
| ಶಾಖೆ | 13–05–2024 | 8,36,062.00 |

ಮೇಲ್ಕಂಡಂತೆ ಪರಿಶೀಲಿಸಿರುವ ನಗದು ಶಿಲ್ಕು ನಗದು ಪುಸ್ತಕದಲ್ಲಿರುವ ಶಿಲ್ಕಿಗೆ ತಾಳೆ ಇರುತ್ತದೆ. ನಗದು ಪುಸ್ತಕವನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ. ಪ್ರತಿ ದಿನ ನಗದು ಕ್ರಮಬದ್ದವಾಗಿ ತಾಳೆಯಾಗಿ, ಯಾವುದೇ ಲೋಪದೋಷ ಇರುವುದಿಲ್ಲ.

**ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ?**

ಕೇಂದ್ರ ಕಛೇರಿಯಲ್ಲಿ ಬ್ಯಾಂಕಿನ CEO, ವ್ಯವಸ್ಥಾಪಕರು, ಅಕೌಂಟೆಂಟ್ ಹಾಗೂ ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ಬ್ಯಾಂಕಿನ ನಗದನ್ನು ನಿರ್ವಹಿಸಲಾಗಿದೆ. ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರ, ಸಹ ಲೆಕ್ಕಿಗರ ಹಾಗೂ ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ನಗದನ್ನು ನಿರ್ವಹಿಸಲಾಗಿದೆ. ಬ್ಯಾಂಕಿನ ಆಡಳಿತ ಮಂಡಳಿಯವರು ಪ್ರತೀ ಶಾಖೆಯಲ್ಲಿ ಇರಿಸಿಕೊಳ್ಳಬಹುದಾದ ಪ್ರತೀದಿನದ ಗರಿಷ್ಠ ನಗದು ಶಿಲ್ಕು ಮಿತಿ ನಿಗದಿಸಿದ್ದು ಹಲವಾರು ದಿನಗಳಲ್ಲಿ ನಿಗದಿಸಿದ ಮೊತ್ತಕ್ಕಿಂತ ಹೆಚ್ಚು ಮೊತ್ತ ಇರಿಸಿಕೊಳ್ಳಲಾಗಿದೆ. ಇದನ್ನು ಲಾಭದಾಯಕವಾಗಿ ವಿನಿಯೋಗಿಸಲು ಸೂಚಿಸಲಾಗಿದೆ.

**ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ.**

ಬ್ಯಾಂಕಿನಲ್ಲಿ ಹಲವಾರು ದಿನಗಳಲ್ಲಿ ನಿಗಧಿ ಪಡಿಸಿದ ಗರಿಷ್ಠ ಮಿತಿಗಿಂತ ನಗದು ಹಣ ಹೆಚ್ಚಾಗಿ ಸಂಗ್ರಹಣೆಯಾಗಿರುತ್ತದೆ. ಆ ವೇಳೆಯಲ್ಲಿ ಅದನ್ನು ತೊಡಗಿಸಲು ಸಮಯ ಇರುವುದಿಲ್ಲ. ಮುಂದಿನ ದಿನದಲ್ಲಿಯೇ ಹೆಚ್ಚುವರಿ ಮೊತ್ತವನ್ನು ಲಾಭದಾಯಕವಾಗಿ ಬ್ಯಾಂಕು, ತೊಡಗಿಸುವಂತೆ ಸೂಚಿಸಲಾಗಿದೆ.

**ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ.**

ಪ್ರಧಾನ ಕಚೇರಿಯಲ್ಲಿ ಇರಿಸಿಕೊಳ್ಳಬಹುದಾದ ನಗದು ಶಿಲ್ಕು ರೂ. 150.00 ಲಕ್ಷಗಳು ಮತ್ತು ಮೂಡಲಪಾಳ್ಯ ಶಾಖೆಯಲ್ಲಿ ಇರಿಸಿಕೊಳ್ಳಬಹುದಾದ ನಗದು ಶಿಲ್ಕು ರೂ. 25.00 ಲಕ್ಷ, ATMನಲ್ಲಿರುವ ನಗದು ಶಿಲ್ಕು ರೂ. 15.00 ಲಕ್ಷ ಮತ್ತು ಸಾಗಾಣಿಕೆಯಲ್ಲಿರುವ (Cash in Transit) ನಗದಿಗೆ ಕ್ರಮವಾಗಿ ರೂ. 30.00 ಲಕ್ಷ ಮತ್ತು 25.00 ಲಕ್ಷ ನ್ಯೂ ಇಂಡಿಯಾ ಇನ್ಶುರೆನ್ಸ್ ಕಂಪನಿ ಇವರಲ್ಲಿ ವಿಮಾ ಪಾಲಿಸಿ ಪಡೆದಿದ್ದು, ಇದು ಚಾಲ್ತಿಯಲ್ಲಿರುತ್ತದೆ. ಕೌಂಟರ್‌ನಲ್ಲಿರುವ ನಗದಿಗೆ ಕೇಂದ್ರ ಕಛೇರಿಯಲ್ಲಿ ರೂ. 20.00 ಲಕ್ಷ ಹಾಗೂ ಶಾಖೆಯಲ್ಲಿ ರೂ. 5.00 ಲಕ್ಷ ವಿಮೆ ಮಾಡಿಸಿದ್ದು ಇದು ಚಾಲ್ತಿಯಲ್ಲಿರುತ್ತದೆ.

**ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿದ್ದಾರೆಯೆ?**

ಆಗಾಗ್ಗೆ ಬ್ಯಾಂಕಿನ ಅಧಿಕಾರಿಗಳು ನಗದನ್ನು ಪರಿಶೀಲಿಸುತ್ತಿದ್ದಾರೆ ಹಾಗೂ ಆಂತರೀಕ ಲೆಕ್ಕ ಪರಿಶೋಧಕರು ಹಾಗೂ ಶಾಸನಬದ್ಧ ಲೆಕ್ಕಪರಿಶೋಧಕರು ನಗದು ಶಿಲ್ಕನ್ನು ಪರಿಶೀಲಿಸಿದ್ದು ಕ್ರಮಬದ್ಧವಾಗಿದೆ.

**(22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು:**

**ಬ್ಯಾಂಕ್ ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ?**

ಹೊಂದಾಣಿಕೆಗೆ ಒಳಪಟ್ಟು ಎಲ್ಲಾ ಬ್ಯಾಂಕುಗಳ ಸಮನ್ವಯಪಟ್ಟಿ ತಾಳೆಯಿರುತ್ತದೆ. ಎಲ್ಲಾ ಬ್ಯಾಂಕುಗಳಿಂದ ಧೃಡೀಕರಣ ಪತ್ರ ಪಡೆದಿರುತ್ತಾರೆ. ಹಳೆಯ ಬಾಕಿ ಯಾವುದೂ ಇರುವುದಿಲ್ಲ. ಈ ಬಗ್ಗೆ ವಿವರವಾದ ಪಟ್ಟಿ ಬ್ಯಾಂಕಿನಲ್ಲಿ ಲಭ್ಯವಿದ್ದು ತಾಳೆ ಇರುತ್ತದೆ.

**ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಅವಕಾಶ ಇದೆಯೇ?**

ಅವಕಾಶದಂತೆ ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲಾಗಿದೆ.

**ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ ಹಾಗೂ ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ**

ಯಾವುದೂ ಇರುವುದಿಲ್ಲ.

**(23) ಹೂಡಿಕೆಗಳು:**

ದಿನಾಂಕ 31–03–2024 ಕ್ಕೆ ಬ್ಯಾಂಕು ಹೊಂದಿರುವ ಹೂಡಿಕೆಗಳು ರೂ. 6149.14 ಲಕ್ಷಗಳು

| ಹೂಡಿಕೆ ಸ್ವರೂಪ | 31.3.2024 ಕ್ಕೆ ಮೊಬಲಗು |
|---|---|
| ಸರ್ಕಾರಿ ಭದ್ರತೆಗಳಲ್ಲಿ | 4,284.78 |
| ಅಪೆಕ್ಸ್‌ಬ್ಯಾಂಕಿನ ಖಾಯಂ ಠೇವಣಿ | 50.00 |
| ಅಪೆಕ್ಸ್‌ಬ್ಯಾಂಕಿನ ಆಪದ್ಧನ ನಿಧಿ | 447.11 |
| BDCC ಬ್ಯಾಂಕ್‌ನ RFD | 94.87 |
| HDFC ಬ್ಯಾಂಕ್‌ನ FD | 60.00 |
| ಮ್ಯೂಚಯಲ್ ಫಂಡ್ | 200.00 |
| ಕೆನರಾ ಬ್ಯಾಂಕ್ ಖಾಯಂ ಠೇವಣಿ | 597.00 |
| BOB ಬ್ಯಾಂಕ್‌ನ FD | 250.00 |
| USF Bank - PNCPS | 132.30 |
| USF Bank - Equity Warrants | 33.08 |
| **ಒಟ್ಟು ಮೊತ್ತ** | **6149.14** |

1. **ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು.**

   ಬ್ಯಾಂಕ್ ಹೊಂದಿರುವ ಎಲ್ಲಾ ಮೇಲ್ಕಂಡ ಹೂಡಿಕೆಗಳ ರಿಜಿಸ್ಟರ್ ಇಟ್ಟು ವಿವರಗಳನ್ನು ಬರೆದು ಬಡ್ಡಿ ಜಮಾ ಬಗ್ಗೆ ವಿವರಗಳನ್ನು ನಮೂದಿಸಲಾಗಿದೆ. ಬಡ್ಡಿ ಜಮಾ ಬಂದಿರುವ ಬಗ್ಗೆ ಪರಿಶೀಲಿಸಲಾಗಿದೆ, ಹೂಡಿಕೆಗಳ ಧೃಢೀಕರಣ ಮತ್ತು ಠೇವಣಿ ರಶೀದಿಗಳನ್ನು

ಪರಿಶೀಲನೆಗೆ ಹಾಜರು ಪಡಿಸಿರುತ್ತಾರೆ ಮತ್ತು ಪಕ್ವವಾಗಿರುವ ಠೇವಣಿಗಳ ಹಣ ಬ್ಯಾಂಕಿಗೆ ಜಮಾ ಆಗಿರುತ್ತದೆ. ಬ್ಯಾಂಕು ಹೊಂದಿರುವ ಠೇವಣಿಗಳ ಮೇಲೆ ಬಡ್ಡಿ ಜಮಾ ಬಂದಿರುತ್ತದೆ. RBI ನ ನಿರ್ದೇಶನದಂತೆ ಬ್ಯಾಂಕಿನ ಹೂಡಿಕೆಗೆ USFB ರವರು PNCPS ಹಾಗೂ ಇಕ್ವಿಟಿ ವಾರೆಂಟ್ ಹಂಚಿಕೆ ಮಾಡಿರುತ್ತಾರೆ. ಅಲ್ಲದೇ RBI ನ ನಿರ್ದೇಶನದಂತೆ ಕೊರತೆಯಾಗಿರುವ PSL ಮೊತ್ತ ರೂ. 143.15 ಲಕ್ಷಗಳನ್ನು ಈ ವರ್ಷ SIDBI ಯಲ್ಲಿ ಖಾಯಂ ಠೇವಣಿಯಲ್ಲಿ ತೊಡಗಿಸಿರುತ್ತಾರೆ. ಹೂಡಿಕೆ ಉಪಸಮಿತಿ ರಚಿಸಿದ್ದು, ಹೂಡಿಕೆಗಳ review ಮಾಡಿ, ಇದರ ಮಾಹಿತಿಯನ್ನು RBI ಗೆ ಅರ್ಧ ವಾರ್ಷಿಕವಾಗಿ ಕಳುಹಿಸಲಾಗುತ್ತದೆ. ಎಲ್ಲಾ ಹೂಡಿಕೆಗಳ ವ್ಯವಹಾರವನ್ನು ಆಡಳಿತ ಮಂಡಳಿಯು ಅನುಮೋದಿಸಿರುತ್ತದೆ. ಬ್ಯಾಂಕ್ RBI ನಿರ್ದೇಶನದಂತೆ ಸರ್ಕಾರಿ ಭದ್ರತೆಗಳಲ್ಲಿ ನಿಗದಿತ ಮಟ್ಟಕ್ಕಿಂತ ಕೊರತೆಯಾಗದಂತೆ ಹೂಡಿಕೆ ಮಾಡಿದೆ. ಬ್ಯಾಂಕ್ NONSLR ಹೂಡಿಕೆಗಳಲ್ಲಿ ಹಣ ತೊಡಗಿಸಿದ್ದು ಇದು RBIನ ನಿಗದಿತ ಮಟ್ಟ ಶೇ 10ರ ಮಿತಿಯಲ್ಲಿಯೇ ಇರುತ್ತದೆ. USFB ನ PNCPS ಗೆ RBI ನ ನಿರ್ದೇಶನದಂತೆ ಕೊರತೆಯಾಗದಂತೆ ಅವಕಾಶ ಕಲ್ಪಿಸಲಾಗಿದೆ.

**2. ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ ಬಗ್ಗೆ ವಿಮರ್ಷೆ.**

ಬ್ಯಾಂಕಿನ ಸರ್ಕಾರಿ ಭದ್ರತೆಗಳ ಹೂಡಿಕೆಗಳನ್ನು **SBI DFHI** ಮೂಲಕ ನಿರ್ವಹಿಸುತ್ತಿದ್ದು ಈ ಖಾತೆಯ ದೃಢೀಕರಣ ಪಡೆಯುತ್ತಿದ್ದು ಲೆಕ್ಕಪತ್ರಗಳೊಂದಿಗೆ ಕಾಲಕಾಲಕ್ಕೆ ಸಮನ್ವಯ ಮಾಡಲಾಗುತ್ತಿದೆ. ಹೂಡಿಕೆಗಳ ಬಗ್ಗೆ ಕ್ರಮಬದ್ಧವಾದ ಹತೋಟಿ ಇದೆ. ವರ್ಷಾಂತ್ಯದಲ್ಲಿ ಪರಿಶೀಲಿಸಿದ್ದು ಲೆಕ್ಕ ಸಮನ್ವಯಗೊಳಿಸಿರುತ್ತಾರೆ. RBI ನಿರ್ದೇಶನದಂತೆ ಬ್ಯಾಂಕ್ ಇತರೆ ಬ್ಯಾಂಕುಗಳಲ್ಲಿ ಹೊಂದಿರುವ ಒಟ್ಟು ಠೇವಣಿ (Placement of Deposits) ಹಿಂದಿನ ವರ್ಷದ ಒಟ್ಟು ಠೇವಣಿಗೆ ಶೇಕಡ 20 ಮೀರಿರುವುದಿಲ್ಲ ಹಾಗೂ Inter Bank Exposure Limit ಸಹ ಕ್ರಮಬದ್ದವಾಗಿ ಅನುಸರಣೆಯಾಗಿದೆ. ಹೂಡಿಕೆಗಳಿಂದ ಬಂದ ಬಡ್ಡಿಯನ್ನು ಲಾಭ-ನಷ್ಟದ ಖಾತೆಗೆ ವರ್ಗಾಯಿಸಲಾಗುತ್ತಿದೆ.

**3. ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಷೆ.**

ಮೌಲ್ಯದಲ್ಲಿ ಆಗುವ ಕುಸಿತದ ಬಗ್ಗೆ ದಿನಾಂಕ 31.3.2024ಕ್ಕೆ ಒಟ್ಟು ರೂ. 23,05,000.00 ಗಳನ್ನು ಕೊರತೆಯಾಗದಂತೆ ಅವಕಾಶ ಕಲ್ಪಿಸಲಾಗಿದೆ ಹಾಗೂ ಹೂಡಿಕೆಗಳ ಏರಿಳಿತದ ನಿಧಿಯಲ್ಲಿ ರೂ. 50,34,375.00 ಗಳನ್ನು ಕೊರತೆಯಾಗದಂತೆ ಅವಕಾಶ ಕಲ್ಪಿಸಲಾಗಿದೆ. ಪ್ರತಿವರ್ಷ IFRಗೆ ಬ್ಯಾಂಕಿನ ನಿವ್ವಳ ಲಾಭದಲ್ಲಿ ಹಂಚಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಗಳಿಗೆ ಘಟನೋತ್ತರ ಅನುಮೋದನೆಯನ್ನು ಸಮಿತಿಯ ಸಭೆಯಲ್ಲಿ ಪಡೆಯಲಾಗುತ್ತಿದೆ.

**4. SGL/BRS ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ.**

ಭಾರತ ಸರ್ಕಾರದ ಭದ್ರತಾ ಬಾಂಡ್‌ಗಳನ್ನು ಹಾಗೂ ರಾಜ್ಯ ಸರ್ಕಾರದ ಭದ್ರತಾ ಬಾಂಡ್‌ಗಳನ್ನು ಎಸ್.ಬಿ.ಐ.ಡಿ.ಎಫ್. ಹೆಚ್.ಐ.ನಲ್ಲಿ ಸಿ.ಎಸ್.ಜಿ.ಎಲ್.ನಲ್ಲಿ ಇಟ್ಟಿದ್ದು, ಸಾಲಾಖೈರಿಗೆ ದೃಢೀಕರಣದ ಫೋಟೋ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಇದು ತಾಳೆಯಾಗಿರುತ್ತದೆ. ವರದಿ ಸಾಲಿನಲ್ಲಿ ಸರ್ಕಾರಿ ಭದ್ರತೆಗಳ ಮೇಲಿನ ಪ್ರೀಮಿಯಂ ರೂ. 0.98 ಲಕ್ಷ ಅಮಾರ್ಟ್‌ಯಿಸ್ ಮಾಡಲಾಗಿದೆ.

**(23ಎ) ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:**

**1. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.**

ದಿನಾಂಕ 31.3.2024ರ ಅಂತ್ಯಕ್ಕೆ ಒಟ್ಟು ರೂ. 20.26 ಕೋಟಿ ನಿಧಿಗಳಿದ್ದು, ದಿನಾಂಕ 31.3.2024ರ ಅಂತ್ಯಕ್ಕೆ ರೂ. 7,33,44,220.71 ಮೀಸಲು ನಿಧಿ ಹೊಂದಿದ್ದು, ಈ ಮೊತ್ತದ ಪೈಕಿ ರೂ. 447.10 ಲಕ್ಷಗಳನ್ನು ಅಪೆಕ್ಸ್ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ಹಾಗೂ ಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ರೂ. 94.87 ಲಕ್ಷ ಹಾಗೂ ರಾಜ್ಯ ಸರ್ಕಾರಿ ಭದ್ರತೆಯಲ್ಲಿ ರೂ. 196.36 ಲಕ್ಷ ಗಳನ್ನು ಪ್ರತ್ಯೇಕವಾಗಿ ಆಪದ್ಧನ ನಿಧಿ ಠೇವಣಿ ಎಂದು ಇಡಲಾಗಿದೆ ಹಾಗೂ ಇಯರ್ ಮಾರ್ಕ್ ಮಾಡಲಾಗಿದೆ. ಆಪದ್ಧನ ನಿಧಿಯು ಸಮರ್ಪಕವಾಗಿ ಕೊರತೆಯಾಗದಂತೆ ಹೂಡಿಕೆಯಾಗಿರುವುದು ಕಂಡುಬಂದಿರುತ್ತದೆ.

**2. SLR ಹೂಡಿಕೆಗಳನ್ನು AFS, HTM ಮತ್ತು HFTಗಳೆಂದು ಪ್ರತ್ಯೇಕಿಸಲಾಗಿದೆಯೇ?**

ದಿನಾಂಕ 31.3.2024ಕ್ಕೆ ಬ್ಯಾಂಕು ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತಾ ಪತ್ರಗಳನ್ನು ಈ ಕೆಳಕಂಡಂತೆ ಹೊಂದಿದ್ದು, ಅದರ ವರ್ಗೀಕರಣವು ಈ ಕೆಳಕಂಡಂತಿರುತ್ತದೆ.

| ಭದ್ರತೆಗಳ ವಿವರ | ಮೊಬಲಗು |
|---|---:|
| ಪಕ್ವವಾಗಲು HTM | 35,79,88,450.00 |
| ಮಾರಾಟಕ್ಕೆ AFS | 7,04,90,000.00 |
| **ಒಟ್ಟು ಮೊತ್ತ** | **42,84,78,450.00** |

ವರದಿ ಸಾಲಿನಲ್ಲಿ ಒಟ್ಟು ರೂ. 0.98 ಲಕ್ಷ ಪ್ರೀಮಿಯಂ ಅಮಾರ್ಟೈಸ್ ಮಾಡಿ ವರದಿ ಸಾಲಿನ ಲಾಭ-ನಷ್ಟದ ಖಾತೆಗೆ ಖರ್ಚು ಹಾಕಿರುತ್ತಾರೆ. ಬ್ಯಾಂಕಿನಲ್ಲಿ ಮಾರಾಟಕ್ಕೆ ಇರುವ (SLR AFS) ಭದ್ರತೆಗಳ ಮಾರುಕಟ್ಟೆ ಬೆಲೆ ಮತ್ತು ಮುಖಬೆಲೆಯ ವ್ಯತ್ಯಾಸಕ್ಕೆ ರೂ. 23,05,000/- ಸವಕಳಿ ಅವಕಾಶದ ಮೊತ್ತವನ್ನು ಕೊರತೆಯಾಗದಂತೆ ಕಲ್ಪಿಸಲಾಗಿದೆ.

**3. ರೂ. 100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?**

ಬ್ಯಾಂಕಿನ ಒಟ್ಟು ಠೇವಣಿ ದಿನಾಂಕ 31.3.2024ಕ್ಕೆ ರೂ. 138.65 ಕೋಟಿ ಇದ್ದು, ದಿನಾಂಕ 31.3.2024ಕ್ಕೆ ರೂ. 50.34 ಲಕ್ಷಗಳ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ಹೊಂದಿರುತ್ತದೆ. ಈ ನಿಧಿಗೆ ಪ್ರತಿ ವರ್ಷ ನಿವ್ವಳ ಲಾಭದಲ್ಲಿ ಕಾಯ್ದಿರಿಸುವುದು ಸೂಕ್ತವಾಗಿದೆ. RBI ನ ನಿರ್ದೇಶನದಂತೆ AFS ಹೂಡಿಕೆಗಳ ಮೇಲೆ ಶೇ. 5 ರಷ್ಟು ನಿಧಿಯನ್ನು ಕ್ರಮವಾಗಿ ನಿರ್ವಹಿಸಲಾಗಿದೆ.

**ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?**

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆ.

**ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?**

ವಿವಿಧ ನಿಧಿಗಳ ನಿಯೋಜನೆಗೆ ಮಾರ್ಗದರ್ಶಿ ಸೂಚಿಗಳನ್ನು ರಚಿಸಿಕೊಳ್ಳುವುದು ಸೂಕ್ತವಾಗಿದೆ.

**ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ?**

ಹೂಡಿಕೆಗಳನ್ನು ಕಾಯ್ದೆಗೆ ಅನುಗುಣವಾಗಿ ಹೂಡಿಕೆ ಮಾಡಲಾಗುತ್ತಿದೆ.

**ಸದರಿ ಹೂಡಿಕೆಗಳ ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ?**

ಸರ್ಕಾರಿ ಭದ್ರತೆಗಳ ಹೂಡಿಕೆಗಳ ಮೇಲಿನ ಬಡ್ಡಿ ಕಾಲಕಾಲಕ್ಕೆ ಬ್ಯಾಂಕಿಗೆ ಜಮಾ ಆಗುತ್ತಿದೆ. ಖಾಯಂ ಠೇವಣಿ, ರಿಸರ್ವ್ ಫಂಡ್ ಹೂಡಿಕೆಗಳ ಬಡ್ಡಿ ಬ್ಯಾಂಕಿಗೆ ಜಮಾ ಆಗುತ್ತಿದೆ.

**ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ**

ಹೂಡಿಕೆಗಳನ್ನು ಸರಿಯಾಗಿ ನಿರ್ವಹಣೆ ಮಾಡಲಾಗಿದೆ. ಈ ಬಗ್ಗೆ ರಿಜಿಸ್ಟರ್ ನಿರ್ವಹಿಸಿದ್ದು ಕ್ರಮಬದ್ಧವಾಗಿದೆ. ಬ್ಯಾಂಕು ಹೂಡಿರುವ ಹೂಡಿಕೆಗಳ ಅರ್ಧ ವಾರ್ಷಿಕ ಪರಿಶೀಲನೆಯನ್ನು ಮಾಡಿ ಆರ್.ಬಿ.ಐ.ಗೆ ವರದಿ ಸಲ್ಲಿಸಲಾಗಿದೆ.

**(24) ಸದಸ್ಯರ ಸಾಲ ಮತ್ತು ಮುಂಗಡಗಳು:**

**ಎ. ಸಾಲಗಳ ಮೌಲ್ಯಾಂಕನ (Credit Appraisal)**

ಉಪ ನಿಯಮಗಳ ಹಾಗೂ ಸಾಲದ ನಿಯಮಾವಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ್ ಬ್ಯಾಂಕಿನಲ್ಲಿ ಬರೆದಿಟ್ಟಿರುವುದರ ಬಗ್ಗೆ ವಿಮರ್ಶೆ.

ಬ್ಯಾಂಕ್ ನಿಗಧಿಪಡಿಸಿದ ಸಾಲದ ಅರ್ಜಿಗಳಲ್ಲಿ ಸಾಲಗಾರರಿಂದ ಸಾಲದ ಅರ್ಜಿ ಪಡೆಯಲಾಗುತ್ತಿದೆ. ಸಾಲಗಳ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಬ್ಯಾಂಕು ಸಾಲಗಾರರ ಆಸ್ತಿಗಳಿಗೆ ಸಂಬಂಧಿಸಿದ ನಿಗಧಿತ ಮೌಲ್ಯದ ಆಸ್ತಿಯನ್ನು ಭದ್ರತೆಯಾಗಿ ಪಡೆಯುತ್ತಿದ್ದು, ಬ್ಯಾಂಕು ಸಾಲ ನೀಡುವಾಗ ಸಾಲವನ್ನು ಮರುಪಾವತಿಸುವ ಸಾಮರ್ಥ್ಯವನ್ನು ಅಳೆಯುವಂತಹ ಪದ್ಧತಿಯನ್ನು ಹೊಂದಿದ್ದು, ಇದನ್ನು ಇನ್ನೂ ಉತ್ತಮಗೊಳಿಸಲು ಕ್ರಮ ಅಗತ್ಯ. ಸಾಲ ಮಂಜೂರು ಮಾಡುವಾಗ ಸಾಲ ಪಡೆಯುವ ವ್ಯಕ್ತಿಯಿಂದ ಅವಶ್ಯವಿರುವ ದಾಖಲೆಗಳನ್ನು ಪಡೆಯುತ್ತಿದ್ದಾರೆ. ಆಡಳಿತ ಮಂಡಳಿ ಸಭೆಯಲ್ಲಿ ಸಾಲಕ್ಕೆ ಭದ್ರತೆ ನೀಡಲಾಗಿರುವ ಆಸ್ತಿಗಳ ಪರಿಶೀಲನೆ ಹಾಗೂ ತಾಂತ್ರಿಕ ತಜ್ಞರಿಂದ ಮೌಲ್ಯಮಾಪನ ಮಾಡಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು, ಸಾಲದ ಅರ್ಜಿಗಳನ್ನು ಮೌಲ್ಯಮಾಪನ ಮಾಡಲಾಗುತ್ತಿದೆ. ಸಾಲಗಳನ್ನು ಮಂಜೂರು ಮಾಡುವಾಗ ಸಾಲಗಾರರ ಅವಶ್ಯಕತೆ, ಉದ್ದೇಶ, ಸಾಲವನ್ನು ತೀರಿಸುವ ಸಾಮರ್ಥ್ಯ ಇತ್ಯಾದಿಗಳನ್ನು ಪರಿಶೀಲಿಸಿ ಸಾಲ ನೀಡುವುದು ಸೂಕ್ತವಾಗಿರುತ್ತದೆ. ಬ್ಯಾಂಕು ಸದಸ್ಯರಿಗೆ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಇತ್ಯಾದಿಗಳನ್ನು ಆಡಳಿತ ಮಂಡಳಿಯ ತೀರ್ಮಾನಕ್ಕೆ ಒಳಪಟ್ಟು ಸಾಲವಿತರಣೆ ಮಾಡುತ್ತಿದೆ. ಆರ್.ಬಿ.ಐ.ನ ಸುತ್ತೋಲೆಯಂತೆ ರೂ. 2.00 ಲಕ್ಷ ಮೇಲ್ಪಟ್ಟ ಆಭರಣದ ಸಾಲಕ್ಕೆ 12 ಕಂತುಗಳನ್ನು ನಿಗಧಿಸಿದೆ.

**ಬಿ. ಸಾಲ ಮಂಜೂರಾತಿ/ ವಿತರಣೆ**

**ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು** (authority at various levels) **ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?**

ಬ್ಯಾಂಕಿನ ಸಾಲ ಮಂಜೂರಾತಿಯ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಹೊಂದಿರುತ್ತದೆ. ಠೇವಣಿ ಆಧಾರ ಸಾಲ, ಜಾಮೀನು ಸಾಲ, ಮುಂದುವರೆದ ಸ್ಥಿರಾಧಾರಸಾಲ ಮತ್ತು ಚಿನ್ನಾಭರಣಗಳ ಮೇಲಿನ ಸಾಲವನ್ನು ಮಂಜೂರು ಮಾಡುವ ಅಧಿಕಾರವನ್ನು ಮಾತ್ರ ಶಾಖಾ ವ್ಯವಸ್ಥಾಪಕರು ಹೊಂದಿರುತ್ತಾರೆ. ಶಾಖಾ ವ್ಯವಸ್ಥಾಪಕರು ನೀಡಿರುವ ಸಾಲಗಳನ್ನು ಸಮಿತಿ ಸಭೆಯಲ್ಲಿ ಸ್ಥಿರೀಕರಿಸುತ್ತಿರುತ್ತಾರೆ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರವಷ್ಟೇ ಸಾಲವನ್ನು ವಿತರಿಸಿರುತ್ತಾರೆ.

**ಸಿ. ದಾಖಲೀಕರಣ ಸಂಗ್ರಹಣೆ (Documentation)**

ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು.

ಸಾಲ ಮಂಜೂರಾತಿ ಆದೇಶದಲ್ಲಿರುವ ನಿಬಂಧನೆಗಳಂತೆ ಅವಶ್ಯವಿರುವ ದಾಖಲೆಗಳನ್ನು ಪಡೆದು ನಂತರವೇ ಸಾಲ ಬಿಡುಗಡೆ ಮಾಡಿರುತ್ತಾರೆ. ಅಡಮಾನ ಸಾಲ ನೀಡುವಾಗ ಸಾಲಗಾರರ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಅಡಮಾನ ಮಾಡಿದ ನಂತರವೇ ಸಾಲ ವಿತರಿಸಿರುತ್ತಾರೆ. ಗೃಹ ನಿರ್ಮಾಣಕ್ಕೆ ನೀಡಿದ ಸಾಲದ ಪ್ರಕರಣಗಳಲ್ಲಿ ಅನುಮೋದನೆಗೊಂಡ ನಕ್ಷೆಯ ಪ್ರಕಾರವೇ ಕಟ್ಟಡ ಕಟ್ಟುವುದಾಗಿ ಮುಚ್ಚಳಿಕೆಯನ್ನು ಪಡೆಯಲಾಗುತ್ತಿದೆ. ರೂ. 2.00 ಲಕ್ಷ ಮೇಲ್ಪಟ್ಟ ಆಭರಣದ ಸಾಲಕ್ಕೆ ಒಂದು ವರ್ಷದ ಅವಧಿಯನ್ನು ನಿಗಧಿಸಿದೆ. ಅಡಮಾನ ಮಾಡಿರುವ ಆಸ್ತಿಗಳಿಗೆ ಸಾಲಗಾರರು ವಿಮೆ ಮಾಡಿಸುತ್ತಿದ್ದು ವಿಮಾ ಪಾಲಿಸಿಗಳನ್ನು ಸಾಲಗಾರರ ಸರಿಗೆಯಲ್ಲಿ ಇಡಲಾಗಿದೆ. ಆಸ್ತಿ ನೋಂದಣಿ ಆದ ನಂತರ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪಡೆದು ನಂತರ ಸ್ಥಿರಾಸ್ತಿ ಸಾಲ ವಿಲೇವಾರಿ ಮಾಡಲಾಗುತ್ತಿದೆ.

**ಡಿ. ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:**

**1. ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ.**

ಸಾಲಗಳ ಬಾಕಿ ಬಾಬ್ತು ದೃಢೀಕರಣ ಪತ್ರಗಳನ್ನು ಕೆಲವೊಂದು ಪ್ರಕರಣಗಳಲ್ಲಿ ದಿನಾಂಕ 31.3.2024ಕ್ಕೆ ಪಡೆದಿರುತ್ತಾರೆ. ಆದರೆ ಸಾಲ ನೀಡಿದ ನಂತರ ಯಾವ ಉದ್ದೇಶಕ್ಕಾಗಿ ಸದಸ್ಯರಿಗೆ ಸಾಲ ನೀಡಲಾಗಿದೆಯೋ ಆ ಉದ್ದೇಶಕ್ಕೆ ವಿನಿಯೋಗಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಕೆಲವೊಂದು ಪ್ರಕರಣಗಳಲ್ಲಿ ಪರಿಶೀಲಿಸಿರುವುದಿಲ್ಲ.

**2. ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ.**

ಸಾಲ ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲ ನೀಡಿರುವುದಿಲ್ಲ. ಹಾಗೂ ಸಾಲ ನವೀಕರಣ ಸಮಯದಲ್ಲಿ ಹಣಕಾಸಿನ ತಃಖ್ತೆಯನ್ನು ಕೆಲವೊಂದು ಪ್ರಕರಣಗಳಲ್ಲಿ ಪಡೆದಿರುವುದಿಲ್ಲ. ಆದರೆ ಆಸ್ತಿ–ಜವಾಬ್ದಾರಿ ವಿವರಗಳನ್ನು ಪರಿಶೀಲಿಸಿ ಅದರ ಬಗ್ಗೆ ಮೌಲ್ಯಾಂಕನ ಮಾಡುವುದು ಸೂಕ್ತವಾಗಿರುತ್ತದೆ ಆದರೆ ಸ್ವಯಂ ಘೋಷಿತ ಆದಾಯ ತೆರಿಗೆ ರಿಟರ್ನ್ಸ್ ಪಡೆಯುವ ಪದ್ದತಿ ಇರುತ್ತದೆ.

**3. ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.**

ರೂ. 10 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿಗೆ ವ್ಯಾಪಾರದ ಅಭಿವೃದ್ದಿಗೆ ಸಾಲ ನೀಡಿದ ಪ್ರಕರಣಗಳಲ್ಲಿ ಸಾಲಗಾರರಿಂದ ಲೆಕ್ಕ ಪರಿಶೋಧಕರಿಂದ ದೃಢೀಕರಿಸಿದ ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಪಡೆಯಲಾಗುತ್ತಿದೆ.

**4. ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.**

ಅವಶ್ಯವಿರುವ ಮಾಹಿತಿಗಳನ್ನು ಪಡೆಯುವುದಕ್ಕೆ ದೂರವಾಣಿ ಮೂಲಕ ಹಾಗೂ ಪತ್ರ ವ್ಯವಹಾರದ ಮೂಲಕ ಪಡೆಯುತ್ತಿದ್ದಾರೆ. ಅವಶ್ಯಕ ಮಾಹಿತಿಗಳನ್ನು ಶಾಖೆಯಿಂದ ಪಡೆದು ಕಡತದಲ್ಲಿ ಇಡಲಾಗಿದೆ.

**5. ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.**

ದಾಸ್ತಾನು, ಉಪಕರಣಗಳು, ಯಂತ್ರೋಪಕರಣಗಳಿಗೆ ಸಾಲ ನೀಡಿರುವುದಿಲ್ಲ. ಸಾಲ ಮಂಜೂರಾತಿ ಪೂರ್ವದಲ್ಲಿ ಸ್ಥಿರ ಸಾಲಕ್ಕೆ ಆಧಾರ ನೀಡಿರುವ ಭದ್ರತೆಗಳನ್ನು ಪರಿಶೀಲಿಸುತ್ತಿದ್ದಾರೆ ಹಾಗೂ ಪುನಃ ಅದೇ ಆಸ್ತಿಯ ಮೇಲೆ ಸಾಲಕ್ಕೆ ಅರ್ಜಿ ಸಲ್ಲಿಸಿದಾಗಲೂ ಮರು ಭೌತಿಕ ಪರಿಶೀಲನೆ ಮಾಡುತ್ತಿದ್ದಾರೆ.

**6. ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ.**

ದಾಸ್ತಾನು, ಉಪಕರಣಗಳು, ಯಂತ್ರೋಪಕರಣಗಳಿಗೆ ಸಾಲ ನೀಡಿರುವುದಿಲ್ಲ. ಸಾಲ ಮಂಜೂರಾತಿ ಪೂರ್ವದಲ್ಲಿ ಸಾಲದ ಘಟಕಗಳಿಗೆ ಭೇಟಿ ನೀಡಿ ವರದಿ ನೀಡುವ ಪದ್ಧತಿ ಇರುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ಸಾಲದ ಉಪಯುಕ್ತತೆಯ ಬಗ್ಗೆ ವರದಿ ಇರುವುದಿಲ್ಲ. ಸಾಲದ ಉಪಯುಕ್ತತೆ ವರದಿ ಪಡೆಯಲು ಗಮನಹರಿಸುವುದು.

**7. ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ** (Allotment Health Code of RBI).

ಅನುತ್ಪಾದಕ ಆಸ್ತಿ ಪದ್ಧತಿ ಜಾರಿಗೆ ಬಂದಾಗಿನಿಂದ ಸದರಿ ಪದ್ಧತಿ ರದ್ದಾಗಿರುತ್ತದೆ.

**8. ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳ ಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.**

ಸಾಲದ ಮಿತಿಗಳ ವಿಸ್ತರಣೆ ಸಂದರ್ಭದಲ್ಲಿ ಹೆಚ್ಚುವರಿ ಮಿತಿಗಳಿಗೆ ಅವಶ್ಯವಿರುವಂತೆ ಹೆಚ್ಚಿನ ಭದ್ರತೆಗೆ ಅವಶ್ಯವಿರುವ ದಾಖಲಾತಿಗಳನ್ನು ಪಡೆಯುತ್ತಿದ್ದಾರೆ. ಆರ್.ಬಿ.ಐ.ನ ಮಾರ್ಗಸೂಚಿಯಂತೆ ಸಾಲಗಳನ್ನು ಉತ್ಪಾದಕ ಹಾಗೂ ಅನುತ್ಪಾದಕ ಆಸ್ತಿಗಳೆಂದು ವರ್ಗಿಕರಿಸಿರುತ್ತಾರೆ.

**9. ಸೌಲಭ್ಯಗಳ ನವೀಕರಣ.**

ಬ್ಯಾಂಕಿನಲ್ಲಿ ಮೀರಳತೆ ಮತ್ತು ಓವರ್‌ಡ್ರಾಫ್ಟ್ ಸಾಲ ನೀಡಿರುವುದಿಲ್ಲ.

**10. ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.**

ಪ್ರಸಕ್ತ ಸಾಲಿನಲ್ಲಿ ಕೈಗಾರಿಕೆಗಳಿಗೆ ಸಾಲ ಮಂಜೂರು ಮಾಡಿರುವುದಿಲ್ಲ.

**ಇ. ಕರಡು ಮತ್ತು ಸಂಶಯಾಸ್ಪದ ಸಾಲಗಳು:**

**1. ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ:**

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮವನ್ನು ಅನುಸರಿಸಿ ಅನುತ್ಪಾದಕ ಆಸ್ತಿಗಳಿಗೆ ಕ್ರಮಬದ್ಧವಾಗಿ ಅವಕಾಶ ಕಲ್ಪಿಸಲಾಗಿದೆ. RBI ನ ಮಾರ್ಗಸೂಚಿಯಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಹಿಂಬಾಲಿಸಿ ವಸೂಲಾತಿ ಮಾಡಲಾಗುತ್ತಿದೆ.

**2. ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ.**

ಬ್ಯಾಂಕಿನಲ್ಲಿ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಗುರುತಿಸಲಾಗಿದೆ ಹಾಗೂ ದಿನಾಂಕ 31.3.2024ಕ್ಕೆ ಬ್ಯಾಂಕ್ ರೂ. 795.10 ಲಕ್ಷ ಕರಡು ಸಾಲದ ನಿಧಿಯನ್ನು ಹೊಂದಿರುತ್ತದೆ.

**3. ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.**

ಬ್ಯಾಂಕಿನಲ್ಲಿ ಸಾಲದ ಮೇಲೆ ಬಡ್ಡಿ ವಸೂಲಾತಿಯಾದಾಗ ಅದನ್ನು ಆದಾಯವೆಂದು ಪರಿಗಣಿಸಲಾಗಿದೆ. ಸಾಲದ ಅಸಲಿಗೆ ಬಡ್ಡಿಯನ್ನು ಸೇರಿಸುವ ಪದ್ಧತಿ ಇರುವುದಿಲ್ಲ. ದಿನಾಂಕ 31.3.2024ಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಸಾಲಗಳ ಮೇಲೆ ಬರಬೇಕಾದ ಬಡ್ಡಿ ರೂ. 228.07 ಲಕ್ಷಗಳನ್ನು ಆಸ್ತಿ-ಜವಾಬ್ದಾರಿ ತಃಖ್ತೆಯಲ್ಲಿ ಎರಡೂ ಕಡೆ ಕಾಂಟ್ರಾ ತೋರಿಸಿರುತ್ತಾರೆ.

**4. ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ:ಸ್ವಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGC ಯನ್ನೊಳಗೊಂಡಂತೆ.**

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಹೋಕುಬಾಕಿ ಸಾಲವೆಂದು ಪರಿಗಣಿಸಿರುವುದಿಲ್ಲ. ಆದುದರಿಂದ ಪುನರುಜ್ಜೀಕರಣ ಕಾರ್ಯಕ್ರಮ ರೂಪಿಸಿರುವುದಿಲ್ಲ.

**5. ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು.**

ಬ್ಯಾಂಕು ವರದಿ ಸಾಲಿನಲ್ಲಿ ಯಾವುದೇ ಸಾಲವನ್ನು ಮನ್ನಾ ಮಾಡಿರುವುದಿಲ್ಲ.

**6. ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ.**

ದಿನಾಂಕ 31.03.2024ಕ್ಕೆ ಒಟ್ಟು ಸಾಲ ರೂ. 9226.73 ಲಕ್ಷ ಇದ್ದು, ಈ ಪೈಕಿ ರೂ. 549.04 ಲಕ್ಷ ಸಾಲ ಸುಸ್ತಿ ಇರುತ್ತದೆ. ಕಳೆದ ಸಾಲಿಗೆ ಹೋಲಿಸಿದಾಗ ಸುಸ್ತಿ ಸಾಲದ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ಸಾಲ ವಸೂಲಾತಿಗೆ ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮದ ಅನ್ವಯ ದಾವ ಕ್ರಮವಿಡಲಾಗಿದೆ. ಸಾಲ ವಸೂಲಾತಿಗೆ ಅವಶ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬ್ಯಾಂಕಿನ ಅಧಿಕಾರಿಗಳು / ನೌಕರರು ಸಾಲಗಾರರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ ಸಾಲ ವಸೂಲಿಗೆ ಕ್ರಮಯಿಡಲಾಗಿದೆ. ಇದಲ್ಲದೆ ಸುಸ್ತಿ ಸಾಲಗಳಿಗೆ ನೋಟಿಸು, ದಾವ, ಅಮಲ್ಜಾರಿ ಇತ್ಯಾದಿ ಕ್ರಮಗಳನ್ನು ಕೈಗೊಂಡು ವಸೂಲಾತಿಯ ಕಾರ್ಯವಿಧಾನ ಅನುಸರಿಸುತ್ತಿದ್ದಾರೆ ಹಾಗೂ ವಸೂಲಾತಿ ತಂಡ ಪರಿಣಾಮಕಾರಿಯಾಗಿ ವಸೂಲಾತಿ ಮಾಡಲು ಇನ್ನೂ ಶ್ರಮವಹಿಸುವುದು.

**ಎಫ್.ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:**

ದಿನಾಂಕ 31.3.2024 ಅಂತ್ಯಕ್ಕೆ ಇರುವ ವಿವಿಧ ಸಾಲಗಳ ವಿವರಗಳು — ಲಕ್ಷಗಳಲ್ಲಿ

| ಸಾಲಗಳು | ಅಲ್ಪಾವಧಿ | ದೀರ್ಘಾವಧಿ | ಮಧ್ಯಮಾವಧಿ ಸಾಲಗಳು |
|---|---|---|---|
| ಜಾಮೀನು ಸಾಲ | – | – | 242.38 |
| ಚಿನ್ನಾಭರಣ ಸಾಲ | 251.43 | – | – |

| ಸಾಲಗಳು | ಅಲ್ಪಾವಧಿ | ದೀರ್ಘಾವಧಿ | ಮಧ್ಯಮಾವಧಿ ಸಾಲಗಳು |
|---|---|---|---|
| ಠೇವಣಿ ಮೇಲಿನ ಸಾಲ | 100.38 | – | – |
| ಸ್ಥಿರಾಧಾರ ಸಾಲ | – | 8300.98 | – |
| ಸಿಬ್ಬಂದಿ ವೈಯಕ್ತಿಕ ಸಾಲ | – | 302.30 | – |
| ಡಿಕ್ರಿ ಸಾಲ | 29.26 | – | – |
| **ಒಟ್ಟು** | **381.07** | **8603.28** | **242.38** |

ಬ್ಯಾಂಕಿನಲ್ಲಿ ಸಾಲವನ್ನು ವಿವಿಧ ಉದ್ದೇಶಗಳಿಗೆ / ಅಭಿವೃದ್ಧಿಗಾಗಿ ನೀಡಿದೆ. ಬ್ಯಾಂಕು ಆರ್.ಬಿ.ಐ.ನ ನಿರ್ದೇಶನದಂತೆ Single ಅಥವಾ Group Borrowers ಗೆ ಗರಿಷ್ಠ ಮಿತಿಯೊಳಗೆ ಸಾಲ ಮಂಜೂರು ಮಾಡಿದೆ.

**ಜಿ. ಸದಸ್ಯರ ಸಾಲ ಮತ್ತು ಮುಂಗಡಗಳು:**

**1 ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.**

ಕಾಲಕಾಲಕ್ಕೆ ಆಡಳಿತ ಮಂಡಳಿಯ ತೀರ್ಮಾನದಂತೆ ಸದಸ್ಯರಿಗೆ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಬಡ್ಡಿದರ, ಸಾಲಗಳ ಅವಧಿ ಇತ್ಯಾದಿಗಳನ್ನು ನಿಗದಿಸಿದೆ.

**2. ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ.** ಲಕ್ಷಗಳಲ್ಲಿ

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ |
|---|---|---|---|---|
| ಜಾಮೀನು ಸಾಲ | 243.37 | 129.70 | 130.69 | 242.38 |
| ಸ್ಥಿರಾಧಾರ ಸಾಲ | 8006.84 | 2343.30 | 2049.16 | 8300.98 |
| ಠೇವಣಿ ಆಧಾರ ಸಾಲ | 80.01 | 198.43 | 178.06 | 100.38 |
| ಸಿಬ್ಬಂದಿ ಸಾಲ | 224.68 | 295.65 | 218.03 | 302.30 |
| ಚಿನ್ನಾಭರಣ ಆಧಾರ ಸಾಲ | 229.15 | 438.31 | 416.03 | 251.43 |
| ಡಿಕ್ರಿ ಸಾಲ | 30.07 | – | 0.81 | 29.26 |
| **ಒಟ್ಟು ಮೊತ್ತ** | **8814.12** | | | **9226.73** |

ಹಿಂದಿನ ಸಾಲಿನ ಮೊತ್ತಕ್ಕೆ ಹೋಲಿಸಿದಾಗ ವರದಿ ಸಾಲಿನಲ್ಲಿ ಸಾಲ ನೀಡಿಕೆ ಜಾಸ್ತಿಯಾಗಿದ್ದು, ಸುಸ್ತಿ ಸಾಲದ ಮೊತ್ತವು ಕಡಿಮೆಯಾಗಿರುತ್ತದೆ.

**3. ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ.**

| ವಿವರಗಳು | 2022–2023 | 2023–2024 |
|---|---|---|
| ಠೇವಣಿಗಳ ಮೇಲಿನ ಸಾಲ | 80,01,135.00 | 1,00,37,523.00 |
| ಚಿನ್ನಭರಣಗಳ ಸಾಲ | 2,29,13,729.00 | 2,51,43,333.00 |
| ಜಾಮೀನು ಸಾಲ | 2,43,37,363.00 | 2,42,37,881.00 |
| ಸ್ಥಿರಾಧಾರ ಸಾಲ | 80,06,83,977.00 | 83,00,98,086.00 |
| ಡಿಕ್ರಿ ಸಾಲ | 30,07,335.00 | 29,25,520.00 |
| ಸಿಬ್ಬಂದಿ ಸಾಲ | 2,24,68,096.00 | 3,02,30,481.00 |
| **ಒಟ್ಟು ಮೊತ್ತ** | **88,14,11,635.00** | **92,26,72,824.00** |

ಹಿಂದಿನ ಸಾಲಿಗೆ ಹೋಲಿಸಿದ್ದಲ್ಲಿ ನೀಡಿರುವ ಸಾಲ ರೂ. 412.61 ಲಕ್ಷದಷ್ಟು ಜಾಸ್ತಿಯಾಗಿದೆ. ಒಳ್ಳೆಯ ಸಾಲಗಾರರನ್ನು ಗುರುತಿಸಿ ಸಾಲ ನೀಡಿ ಬ್ಯಾಂಕಿನ ಆಧಾಯವನ್ನು ಹೆಚ್ಚಿಸಲು ಕ್ರಮವಿಡುವುದು. ಮಾರ್ಚ್ ಅಂತ್ಯಕ್ಕೆ ಕ್ರೆಡಿಟ್ ಡೆಪಾಸಿಟ್ ರೇಷಿಯೋ ಶೇ. 59.19% ಇದ್ದು ಇದು RBIನ ಸೂಕ್ತ ಮಟ್ಟವಾದ ಶೇ 70ರ ಮಿತಿಯಲ್ಲಿಯೇ ಇರುತ್ತದೆ. ಬ್ಯಾಂಕ್ Real Estate ಹಾಗೂ Commercial Real Estate ಗಳಿಗೆ ವರದಿ ಸಾಲಿನಲ್ಲಿ ಸಾಲ ನೀಡಿರುವುದಿಲ್ಲ. ಬ್ಯಾಂಕು ಉತ್ತಮ ಗುಣಮಟ್ಟದ ಸಾಲವನ್ನು ವಿತರಿಸಿ, ಬ್ಯಾಂಕಿನ ಆದಾಯವನ್ನು ಹೆಚ್ಚಿಸುವುದು. ಸುಸ್ತಿ ಸಾಲಗಳ ವಸೂಲಾತಿಗೆ ಕ್ರಮ ಚುರುಕುಗೊಳಿಸುವುದು.

**4. ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ.**

ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರೂದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?

ಇಂತಹ ಪ್ರಕರಣಗಳು ವರದಿ ಸಾಲಿನಲ್ಲಿ ಇರುವುದಿಲ್ಲ.

**5. ಸಾಲದ ಕುಳುವಾರು ತ:ಖ್ತೆಗಳು ಆಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುವ ಬಗ್ಗೆ.**

ಎಲ್ಲಾ ಸಾಲಗಳ ಕುಳುವಾರು ತ:ಖ್ತೆಗಳು ಆಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುತ್ತದೆ. ಆಯ್ದ ಕೆಲವು ಸದಸ್ಯರು ಅವರ ಸಾಲದ ಖಾತೆಯಲ್ಲಿರುವ ಬಾಕಿ ಮೊತ್ತವನ್ನು ಒಪ್ಪಿ ದೃಢೀಕರಿಸಿರುತ್ತಾರೆ.

**6. ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶ ವಿರುವುದೋ?**

ಅಂತಹ ಪ್ರಕರಣಗಳು ಇರುವುದಿಲ್ಲ.

**7. ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ.**

ಅನ್ವಯಿಸುವುದಿಲ್ಲ.

**8. ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ.**

ಯಾವುದೂ ಇರುವುದಿಲ್ಲ.

**9. ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರಿ ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ.**

ಯಾವುದೂ ಇರುವುದಿಲ್ಲ.

**10. ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ.**

ಬ್ಯಾಂಕಿನಲ್ಲಿ ಚಿನ್ನಾಭರಣ ಅಡವಿನ ಸಾಲ ನೀಡುತ್ತಿದ್ದು ಆಡಳಿತ ಮಂಡಳಿಯ ತೀರ್ಮಾನದಂತೆ ಕೇಂದ್ರ ಕಛೇರಿಯಲ್ಲಿ ಚಿನ್ನಾಭರಣಗಳು ಸಿಇಓ, ವ್ಯವಸ್ಥಾಪಕರ ಹಾಗೂ ಹಿರಿಯ ಸಹಾಯಕರು ಇವರುಗಳ ಜಂಟಿ ಅಭಿರಕ್ಷೆಯಲ್ಲಿ ಇರುತ್ತದೆ. ಶಾಖೆಯಲ್ಲಿ ಚಿನ್ನಾಭರಣಗಳು ಶಾಖಾ ವ್ಯವಸ್ಥಾಪಕರ ಹಾಗೂ ಸಹಲೆಕ್ಕಿಗರ ಜಂಟಿ ಅಭಿರಕ್ಷೆಯಲ್ಲಿ ಸುರಕ್ಷಿತವಾಗಿದೆ. ಆಗಾಗ್ಗೆ ಚಿನ್ನಾಭರಣಗಳ ಚೀಲಗಳನ್ನು ಪರಿಶೀಲಿಸಿದ್ದು ಕ್ರಮಬದ್ಧವಾಗಿದ್ದು ರಿಜಿಸ್ಟರ್ ನಿರ್ವಹಿಸಲಾಗುತ್ತಿದೆ. ಚಿನ್ನಾಭರಣಗಳಿಗೆ ವಿಮೆ ಮಾಡಿಸಿದ್ದು ಇದು ಚಾಲ್ತಿಯಲ್ಲಿರುತ್ತದೆ. ಚಿನ್ನಾಭರಣಗಳ ಕೆಲವೊಂದು ಬ್ಯಾಗುಗಳನ್ನು ಪರೀಶೀಲಿಸಿದ್ದು ಕ್ರಮಬದ್ಧವಾಗಿರುವುದು ಕಂಡುಬಂದಿದೆ. RBI ನಿರ್ದೇಶನದಂತೆ Gold Bullet Loan ಅನ್ನು ಗರಿಷ್ಟ ರೂ. 2.00 ಲಕ್ಷ ಮಾತ್ರ ಪ್ರತಿ ಸದಸ್ಯರಿಗೆ ನೀಡುತ್ತಿರುವುದು ಕ್ರಮವಾಗಿದೆ. ಹಾಗೂ ಸದಸ್ಯರಲ್ಲದವರಿಗೆ (Non Members) ಗರಿಷ್ಟ ರೂ 1.00 ಲಕ್ಷ ಮಾತ್ರ ಚಿನ್ನದ ಸಾಲ ನೀಡುತ್ತಿರುವುದು ಕ್ರಮವಾಗಿದೆ. ಚಿನ್ನಾಭರಣಗಳ ಭದ್ರತೆಗಾಗಿ ಭದ್ರತಾ ಕೊಠಡಿಯ ವ್ಯವಸ್ಥೆ ಕಲ್ಪಿಸಲಾಗಿದೆ.

**11. ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.**

ಬ್ಯಾಂಕಿನಲ್ಲಿ ದಿನಾಂಕ 31-03-2024ರ ಅಂತ್ಯಕ್ಕೆ ಆಧಾರ ರಹಿತ ಸಾಲಗಳು ಶೇ. 1.47 ಇದ್ದು ಇದು ಆರ್‌ಬಿಐನ ಮಿತಿಯಲ್ಲಿರುತ್ತದೆ ಹಾಗೂ ಆಧಾರ ಸಾಲದ ಪ್ರಮಾಣ ಶೇ. 98.53 ಇರುತ್ತದೆ.

**12. ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನ್ಯತೇಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.**

ಗುರುತರವಾದ ನ್ಯೂನತೆಗಳು ಕಂಡುಬಂದಿರುವುದಿಲ್ಲ. ಲೆಕ್ಕಪರಿಶೋಧನಾ ಅವಧಿಯಲ್ಲಿ ಸಣ್ಣಪುಟ್ಟ ನ್ಯೂನತೆಗಳಿರುವುದನ್ನು ಸರಿಪಡಿಸಲಾಗಿದೆ. ವರದಿ ಸಾಲಿನಲ್ಲಿ ಸಂಘ ಸಂಸ್ಥೆಗಳಿಗೆ ಸಾಲ ನೀಡಿರುವುದಿಲ್ಲ. ಸಿಬಿಲ್ ವರದಿ ಪಡೆದು ಸರಿಗೆಯಲ್ಲಿರುವುದು

ಉತ್ತಮ. ಸಾಲದ ಅಂತಿಮ ಬಳಕೆ ಬಗ್ಗೆ ಗಮನಹರಿಸುವುದು ಸೂಕ್ತವಾಗಿದೆ. ಸಾಲವನ್ನು ಮಂಜೂರು ಮಾಡುವಾಗ ಸಾಲಗಾರರ ಮರುಪಾವತಿ ಸಾಮರ್ಥ್ಯ ಪರಿಗಣಿಸುವುದು ಸೂಕ್ತವಾಗಿದೆ.

**13. ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು.**

ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿದ್ದು ಕ್ರಮಬದ್ಧವಾಗಿರುತ್ತದೆ. ಯಾವುದೇ ಗಂಭೀರ ವ್ಯತ್ಯಾಸ ಕಂಡು ಬಂದಿರುವುದಿಲ್ಲ.

**14. ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು.**

ದಿ. 31-03-2024ಕ್ಕೆ ಒಟ್ಟು ಸದಸ್ಯರು 9662 ಇದ್ದು ಇದರಲ್ಲಿ 1075 ಜನ ಸದಸ್ಯರು ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿದ್ದು ಶೇ. 11.12ರಷ್ಟು ಇರುತ್ತದೆ.

**15. ರೂ. 20,000ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.**

ಅಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ. ಎಲ್ಲಾ ಸಾಲಗಳನ್ನು ಸಾಲಗಾರರ SB ಖಾತೆಗೆ ವರ್ಗಾಯಿಸಿ ನಂತರ ವಿತರಿಸಲಾಗಿದೆ.

**16. ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು.**

ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ಅರ್ಜಿಯನ್ನು ದಾಖಲೆ ಮಾಡಿ ನಂತರ ಅವರ ವ್ಯವಹಾರವನ್ನು ಪರಿಶೀಲಿಸಿ ಸಾಲ ಮಂಜೂರು ಮಾಡಲಾಗುತ್ತಿದೆ. ರಿಜಿಸ್ಟರ್ ನಿರ್ವಹಿಸಲಾಗಿದೆ.

**17. ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ.**

ಬ್ಯಾಂಕಿನಲ್ಲಿ ಸಾಲಗಳನ್ನು ಉತ್ಪಾದಕ ಹಾಗೂ ಅನುತ್ಪಾದಕ ಸಾಲಗಳೆಂದು ವರ್ಗೀಕರಿಸುವ ಪದ್ಧತಿ ಇರುತ್ತದೆ. ದಿನಾಂಕ 31-03-24ರ ಅಂತ್ಯಕ್ಕೆ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿಯಲ್ಲಿ ರೂ. 795.10 ಲಕ್ಷಗಳಿರುತ್ತದೆ. ಸಂಶಯಾತ್ಮಕ ಮತ್ತು ಕರಡು ಸಾಲಗಳನ್ನು ಪರಿಣಾಮಕಾರಿಯಾಗಿ ಗುರುತಿಸಿ ವಸೂಲಾತಿ ಮಾಡಲಾಗುತ್ತಿದೆ.

**18. ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೋ?**

ಸಂಶಯಾತ್ಮಕ ಮತ್ತು ಮುಳುಗು ಸಾಲದ ನಿಧಿಯಲ್ಲಿ ರೂ. 795.10 ಲಕ್ಷ ಬ್ಯಾಂಕು ಹೊಂದಿರುತ್ತದೆ.

**19. ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನ್ಯತೇಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.**

ಗುರುತರವಾದ ನ್ಯೂನತೆಗಳು ವರದಿ ಸಾಲಿನಲ್ಲಿ ಕಂಡು ಬಂದಿರುವುದಿಲ್ಲ. ಹಾಗೂ ಸಂಘ ಸಂಸ್ಥೆಗಳಿಗೆ ಸಾಲ ನೀಡಿರುವುದಿಲ್ಲ.

**20. ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್ಆರ್-1/ಎ.1,81-82 ದಿನಾಂಕ : 04-07-1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು.**

ದಿನಾಂಕ 31-3-2024 ರಲ್ಲಿದಂತೆ ಆಯ್ದ ಸಾಲದ ಖಾತೆಗಳ ಸಾಲಗಾರರಿಂದ ಸಾಲದ ಖಾತೆಯಲ್ಲಿರುವ ಬಾಕಿ ಖಚಿತ ಪಡಿಸಿಕೊಂಡಿರುತ್ತದೆ. ಇದರ ಪಟ್ಟಿಯನ್ನು ವರದಿಗೆ ಲಗತ್ತಿಸಲಾಗಿದೆ.

**(25) ಸುಸ್ತಿ ಸಾಲಗಳ ವಿವರ:**

**1. ಸುಸ್ತಿ ಸಾಲದ ಮೊತ್ತ.**

ದಿನಾಂಕ 31.3.2024ಕ್ಕೆ ಬ್ಯಾಂಕಿನಿಂದ ಒಟ್ಟು ರೂ. 9226.73 ಲಕ್ಷ ಸಾಲ ನೀಡಿದ್ದು, ಈ ಸಾಲದ ಪೈಕಿ ರೂ. 549.04 ಲಕ್ಷ ಸಾಲ ಸುಸ್ತಿಯಾಗಿರುತ್ತದೆ. ಬ್ಯಾಂಕು ನೀಡಿರುವ ಒಟ್ಟು ಸಾಲದಲ್ಲಿ ಶೇ. 5.95% ರಷ್ಟು ಮಾತ್ರ ಸಾಲ ಸುಸ್ತಿ ಇರುತ್ತದೆ. ಸುಸ್ತಿ ಸಾಲ ವಸೂಲಿ ಬಗ್ಗೆ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಕಾನೂನು ಕ್ರಮ ಜರುಗಿಸಿ ಸುಸ್ತಿ ಸಾಲಗಳ ವಸೂಲಾತಿಗೆ ಕ್ರಮವಿಡುವುದು.

**2. ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ.**

ದಿನಾಂಕ 31.3.2024ರಲ್ಲಿದಂತೆ ಬ್ಯಾಂಕಿನ ಒಟ್ಟು ಸಾಲಕ್ಕೆ ಶೇ. 5.95% ರಷ್ಟು ಸುಸ್ತಿ ಸಾಲ ಇರುತ್ತದೆ. ಸುಸ್ತಿ ಸಾಲ ವಸೂಲಿ ಮಾಡಲು ಅಗತ್ಯ ಕ್ರಮವಿಡಬೇಕಾಗಿದೆ.

**3. ದಿನಾಂಕ 31.3.2024ರಲ್ಲಿದಂತೆ ಸುಸ್ತಿ ಸಾಲದ ವಿವರ.**

| ಅವಧಿ | ಚಿನ್ನದ ಸಾಲ | ಕಂತು ಸಾಲ | ಸ್ಥಿರ ಸಾಲ |
|---|---|---|---|
| ಒಂದು ವರ್ಷದೊಳಗೆ | – | 1.39 | 515.61 |
| 1 ರಿಂದ 2 ವರ್ಷದೊಳಗೆ | – | – | – |
| 2 ರಿಂದ 3 ವರ್ಷದೊಳಗೆ | – | 1.28 | – |
| 3 ರಿಂದ 4 ವರ್ಷದೊಳಗೆ | – | 17.27 | – |
| 4 ರಿಂದ 5 ವರ್ಷದೊಳಗೆ | – | – | – |
| 5 ರಿಂದ 6 ವರ್ಷದೊಳಗೆ | – | – | – |
| 6 ವರ್ಷ ಮೇಲ್ಪಟ್ಟ | – | – | 13.48 |
| **ಒಟ್ಟು ರೂ** | – | **19.94** | **529.09** |

ಸುಸ್ತಿ ಸಾಲದ ವಸೂಲಾತಿಗೆ ನಿರಂತರವಾಗಿ ಅಗತ್ಯ ಕ್ರಮವಿಡುವುದು.

**4. ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.**

ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ 24 ಆಗಿದ್ದು ಇದರ ಒಟ್ಟು ಮೊತ್ತ ರೂ. 570.62 ಲಕ್ಷ ಆಗಿರುತ್ತದೆ. ಉಳಿದ ಪ್ರಕರಣಗಳಲ್ಲಿ ನೋಟೀಸ್ ನೀಡಿದ್ದು ಕಾನೂನು ಕ್ರಮ ತೆಗೆದು ಕೊಳ್ಳಲು ಸೂಚಿಸಿದೆ.

**5. ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರೂದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?**

ಆಡಳಿತ ಮಂಡಳಿ ಸದಸ್ಯರಿಗೆ ಯಾವುದೇ ರೀತಿಯ ಸಾಲ ನೀಡಿರುವುದಿಲ್ಲ. ಆದ್ದರಿಂದ ಇದು ಅನ್ವಯಿಸುವುದಿಲ್ಲ.

**6. ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು.**

ಅಂತಹ ಯಾವ ಪ್ರಕರಣಗಳು ಇರುವುದಿಲ್ಲ.

**7. ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು).**

ದಿನಾಂಕ 31.3.2024ಕ್ಕೆ ಬ್ಯಾಂಕಿನಿಂದ ನೀಡಿರುವ ಒಟ್ಟು ಸಾಲ ರೂ. 9226.73 ಲಕ್ಷದಲ್ಲಿ ರೂ. 549.04 ಲಕ್ಷ ಸಾಲಗಳು ಅನುತ್ಪಾದಕ ಸಾಲಗಳಾಗಿರುತ್ತವೆ. ಈ ಬಗ್ಗೆ ಒಟ್ಟು ರೂ. 968.11 ಲಕ್ಷ ಅವಕಾಶ ಕಲ್ಪಿಸಿರುತ್ತಾರೆ. ದಿನಾಂಕ 31.3.2024ಕ್ಕೆ ಬ್ಯಾಂಕಿನ ಒಟ್ಟು ಸ್ಥೂಲ ಎನ್.ಪಿ.ಎ. ಶೇ. 5.95% ರಷ್ಟು ಇದ್ದು, ಬ್ಯಾಂಕಿನ ನಿವ್ವಳ ಎನ್.ಪಿ.ಎ. ಶೇ. ಶೂನ್ಯವಾಗಿರುತ್ತದೆ. ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಒಟ್ಟು NPA ಕಡಿಮೆಯಾಗಿದ್ದು, ಸಾಲ ವಸೂಲಾತಿ ತಂಡವು ವ್ಯವಸ್ಥಿತವಾಗಿ ಶ್ರಮವಹಿಸಿ ಸುಸ್ತಿ ಸಾಲ ವಸೂಲಾತಿ ಮಾಡಲು ಕ್ರಮವಿಡುವುದು.

ಕಳೆದ ಸಾಲಿಗೆ ಹೋಲಿಸಿದಾಗ ಒಟ್ಟು ಅನುತ್ಪಾದಕ ಆಸ್ತಿಗಳ ಪ್ರಮಾಣದಲ್ಲಿ ಕಡಿಮೆ ಆಗಿರುತ್ತದೆ. ಎನ್.ಪಿ.ಎ. 90 ದಿನಗಳಿಗೆ ಬಂದಿದ್ದು, ಒಳ್ಳೆಯ ಸಾಲಗಾರರನ್ನು ಗುರುತಿಸಿ ಅವರ ಸಾಲದ ಅವಶ್ಯಕತೆ, ಸಾಲಗಾರರ ಆದಾಯ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅನುತ್ಪಾದಕ ಆಸ್ತಿಯನ್ನು ಕಡಿಮೆಗೊಳಿಸಲು ಇನ್ನೂ ಹೆಚ್ಚಿನ ರೀತಿಯಲ್ಲಿ ವಸೂಲಾತಿಯನ್ನು ಬಿಗಿಗೊಳಿಸಿ ವಸೂಲಿ ಮಾಡಲು ಕ್ರಮ ಕೈಗೊಳ್ಳುವುದು. ದೃಢೀಕರಿಸಿದ NPA ತಃಖ್ತೆಯನ್ನು ವರದಿಗೆ ಲಗತ್ತಿಸಿದೆ. ಬ್ಯಾಂಕ್ ನಿರಂತರವಾಗಿ CRAR ಅನ್ನು ಶೇಕಡ 12 ಕ್ಕಿಂತ ಹೆಚ್ಚು ನಿರ್ವಹಿಸಿದ್ದು ಷೇರು ಲಿಂಕಿಂಗ್‌ನಿಂದ ರಿಯಾಯಿತಿ ಹೊಂದಿರುತ್ತದೆ. ಬ್ಯಾಂಕು ಕರಡು ಸಾಲದ ನಿಧಿಯಲ್ಲಿ ಸಾಕಷ್ಟು ಕಾಯ್ದಿರಿಸಿದೆ. NPA ನಿರ್ವಹಣೆಗೆ ಹೆಚ್ಚಿನ ಗಮನ ಹರಿಸಿ ಅವುಗಳನ್ನು ಅಪ್‌ಗ್ರೇಡ್ ಮಾಡಲು ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

**8. ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು.**

ಬ್ಯಾಂಕು ವರದಿ ಸಾಲಿನಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರಿಗೆ ಹಾಗೂ ಅವರ ಸಂಬಂಧಿಕರಿಗೆ ಯಾವುದೇ ಸಾಲ ನೀಡಿರುವುದಿಲ್ಲ.

**9. ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ.**

ದಿನಾಂಕ 31-03-2024ಕ್ಕೆ ಬ್ಯಾಂಕಿನಿಂದ ಆದ್ಯತಾ ವಲಯಕ್ಕೆ ನೀಡಬೇಕಾದ ಮತ್ತು ನೀಡಿರುವ ಸಾಲಗಳ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| | |
|---|---|
| 2022-23ನೇ ಸಾಲಿನ ಬ್ಯಾಂಕಿನ ಒಟ್ಟು ಸರಾಸರಿ ಸಾಲ | ರೂ. 8801.76 |
| 1. ಆದ್ಯತಾ ವಲಯಕ್ಕೆ ನೀಡಬೇಕಾದ ಸಾಲ ಶೇ. 60ರಷ್ಟು | ರೂ. 5281.05 |
| ಆದ್ಯತಾ ವಲಯಕ್ಕೆ ನೀಡಿರುವ ಸಾಲ (ಶೇ. 66.78%) | ರೂ. 5877.84 |
| 2. ಮೈಕ್ರೋ ಎಂಟರ್ ಪ್ರೈಸಸ್‌ಗೆ ನೀಡಬೇಕಾದ ಸಾಲ ಶೇ. 7.5% | ರೂ. 660.14 |
| ಮೈಕ್ರೋ ಎಂಟರ್ ಪ್ರೈಸಸ್‌ಗೆ ನೀಡಿರುವ ಸಾಲ (ಶೇ. 10%) | ರೂ. 879.85 |
| 3. ದುರ್ಬಲ ವರ್ಗಕ್ಕೆ ನೀಡಬೇಕಾದ ಸಾಲ ಶೇ. 11.5% | ರೂ. 1012.20 |
| ದುರ್ಬಲ ವರ್ಗಕ್ಕೆ ನೀಡಿರುವ ಸಾಲ (ಶೇ. 18.10%) | ರೂ. 1593.45 |

ಸಾಲದ ಅರ್ಜಿಗಳಲ್ಲಿ ನಮೂದಿಸಿರುವ ಸಾಲದ ಉದ್ದೇಶಗಳನ್ನು ಗಣನೆಗೆ ತೆಗೆದುಕೊಂಡು ಆದ್ಯತಾ ವಲಯಕ್ಕೆ ನೀಡಿರುವ ಸಾಲಗಳನ್ನು ವರ್ಗೀಕರಿಸಿದ್ದು, ಹಾಗೂ ಸಾಲದ ಅರ್ಜಿಗಳಲ್ಲಿ / ಸದಸ್ಯತ್ವ ಅರ್ಜಿಗಳಲ್ಲಿ ಸಾಲಗಾರರು ಪ.ಜಾ/ಪ.ಪಂ. ವರ್ಗಕ್ಕೆ ಸೇರಿದ ಬಗ್ಗೆ ನೀಡಿರುವ ವಿವರಗಳನ್ವಯ ಸಾಲಗಳನ್ನು ವರ್ಗೀಕರಿಸಲಾಗಿದೆ. ವರ್ಷಾಂತ್ಯಕ್ಕೆ ಆದ್ಯತಾವಲಯದ ಜನರಲ್ ವಿಭಾಗದಲ್ಲಿ ಕೊರತೆಯಾಗಿರುವ ಮೊತ್ತಕ್ಕೆ ರೂ. 50.00 ಕೋಟಿಗಳನ್ನು PSL Certificate ಖರೀದಿಸಲಾಗಿದೆ. ಅದೇ ರೀತಿ ಮೈಕ್ರೋ ಎಂಟರ್ ಪ್ರೈಸಸ್ ವಿಭಾಗದಲ್ಲಿ ಕೊರತೆಯಾಗಿರುವ ಮೊತ್ತಕ್ಕೆ ರೂ. 14.00 ಕೋಟಿಗಳಿಗೆ PSL Certificate ಖರೀದಿಸಿದ್ದು, ವರ್ಷಾಂತ್ಯಕ್ಕೆ ಯಾವುದೇ ರೀತಿಯ ಕೊರತೆ ಇರುವುದಿಲ್ಲ.

**10. ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ.**

ದುರ್ಬಲ ವರ್ಗದವರಿಗೆ ಬ್ಯಾಂಕಿನಿಂದ ನೀಡಿರುವ ಸಾಲಗಳಲ್ಲಿ ಸಾಲ ಖೈರಿಗೆ ಬರಬೇಕಾದ ಬಾಕಿ ಮೊತ್ತ ರೂ. 1593.45 ಲಕ್ಷ ಆಗಿದ್ದು ಇದರ ಪ್ರಮಾಣ ಶೇ. 18.10% ಆಗಿರುತ್ತದೆ. ಇದು RBI ನ ನಿಗಧಿತ ಮಟ್ಟಕಿಂತ ಹೆಚ್ಚಿಗೆ ಇರುತ್ತದೆ.

**11. ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ.**

ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ ಶೇ. 18.10% ಆಗಿರುತ್ತದೆ.

**ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:-**

ಬ್ಯಾಂಕಿನಲ್ಲಿ ಸಾಲ ನೀಡಿಕೆಯಲ್ಲಿ ಗಮನಾರ್ಹ ನ್ಯೂನತೆಗಳು ಕಂಡು ಬಂದಿರುವುದಿಲ್ಲ. ಬ್ಯಾಂಕ್ ನಿಗಧಿಪಡಿಸಿದ ಸಾಲದ ಅರ್ಜಿಗಳಲ್ಲಿ ಸಾಲಗಾರರಿಂದ ಸಾಲದ ಅರ್ಜಿ ಪಡೆಯಲಾಗುತ್ತಿದೆ. ಸಾಲಗಳ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಬ್ಯಾಂಕು ಸಾಲಗಾರರ ಆಸ್ತಿಗಳಿಗೆ ಸಂಬಂಧಿಸಿದ ನಿಗಧಿತ ಮೌಲ್ಯದ ಆಸ್ತಿಯನ್ನು ಭದ್ರತೆಯಾಗಿ ಪಡೆಯುತ್ತಿದ್ದು, ಬ್ಯಾಂಕು ಸಾಲ ನೀಡುವಾಗ ಸಾಲವನ್ನು ಮರುಪಾವತಿಸುವ ಸಾಮರ್ಥ್ಯವನ್ನು ಅಳೆಯುವಂತಹ ಪದ್ಧತಿಯನ್ನು ಹೊಂದಿದ್ದು, ಇದನ್ನು ಇನ್ನೂ ಉತ್ತಮಗೊಳಿಸಲು ಕ್ರಮ ಅಗತ್ಯ. ಸಾಲ ಮಂಜೂರು ಮಾಡುವಾಗ ಸಾಲ ಪಡೆಯುವ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದ ಅವಶ್ಯವಿರುವ ದಾಖಲೆಗಳನ್ನು ಪಡೆಯುತ್ತಿದ್ದಾರೆ. ಆಡಳಿತ ಮಂಡಳಿ ಸಭೆಯಲ್ಲಿ ಸಾಲಕ್ಕೆ ಭದ್ರತೆ ನೀಡಲಾಗಿರುವ ಆಸ್ತಿಗಳ ಪರಿಶೀಲನೆ ಹಾಗೂ ತಾಂತ್ರಿಕ ತಜ್ಞರಿಂದ ಮೌಲ್ಯಮಾಪನ ಮಾಡಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು, ಸಾಲದ ಅರ್ಜಿಗಳನ್ನು ಮೌಲ್ಯಮಾಪನ ಮಾಡಲಾಗುತ್ತಿದೆ. ಸಾಲಗಳನ್ನು ಮಂಜೂರು ಮಾಡುವಾಗ ಸಾಲಗಾರರ ಅವಶ್ಯಕತೆ, ಉದ್ದೇಶ, ಸಾಲವನ್ನು ತೀರಿಸುವ ಸಾಮರ್ಥ್ಯ ಇತ್ಯಾದಿಗಳನ್ನು ಪರಿಶೀಲಿಸಿ ಸಾಲ ನೀಡುವುದು ಸೂಕ್ತವಾಗಿರುತ್ತದೆ. ಬ್ಯಾಂಕಿನಲ್ಲಿ ಸಾಲ ನೀಡಿಕೆಯಲ್ಲಿ ಗಮನಾರ್ಹ ನ್ಯೂನತೆಗಳು ಕಂಡು ಬಂದಿರುವುದಿಲ್ಲ. ಕೆಲವೊಂದು ಸಾಲದ ಖಾತೆಗಳಲ್ಲಿ ಬಡ್ಡಿ ಲೆಕ್ಕಾಚಾರವನ್ನು ಪರೀಕ್ಷಿಸಲಾಗಿ ಕ್ರಮಬದ್ಧವಾಗಿರುತ್ತದೆ. ಮಂಜೂರಾದ ಸಾಲವು ಸದರಿ ಉದ್ದೇಶಕ್ಕೆ ಸದ್ಬಳಕೆಯಾದ ಬಗ್ಗೆ ಕ್ರಮವಿಡಲು ಸೂಚಿಸಲಾಗಿದೆ. Single and group borrowers ಗೆ RBI ನ ನಿರ್ದೇಶನದಂತೆ ಸಾಲ ವಿತರಣೆಯಾಗಿದೆ. ಸಾಲಗಾರರ CIBIL ವರದಿ ಮಾಡಿಸುವುದು. ಬ್ಯಾಂಕಿನ CD ratio ಶೇ. 59.19% ಇದ್ದು, RBI ನ ನಿಗಧಿತ ಮಟ್ಟದಲ್ಲಿಯೇ ನಿರ್ವಹಿಸಲಾಗಿದೆ. ಪ್ರತಿ 03 ವರ್ಷಕ್ಕೊಮ್ಮೆ ಅಡಮಾನ ಆಸ್ತಿಗಳ ಮರು ಮೌಲ್ಯಮಾಪನ ಮಾಡಸತಕ್ಕದ್ದು. ಸಾಲದ ಮೊತ್ತದ ಅಂತಿಮ ಬಳಕೆಯನ್ನು ಅದೇ ಉದ್ದೇಶಕ್ಕೆ ಬಳಕೆ ಮಾಡಿರುವ ಬಗ್ಗೆ ವರದಿ ಪಡೆಯತಕ್ಕದ್ದು.

**(26) ಸಂಘದ ಸ್ಥಿರಾಸ್ತಿ–ಚರಾಸ್ತಿಗಳ ಪರಿಶೀಲನೆ:**

**ಎ ಸ್ಥಿರಾಸ್ತಿ :**

**1. ನಿವೇಶನ :**

ಬ್ಯಾಂಕಿನ ಕೇಂದ್ರ ಕಛೇರಿ ಮಲ್ಲೇಶ್ವರದ ಹಾಗೂ ಬ್ಯಾಂಕಿನ ಶಾಖೆಗೆ ಮೂಡಲಪಾಳ್ಯದ ಕಟ್ಟಡದ ನಿವೇಶನ ಈ ಎರಡು ನಿವೇಶನಗಳ ಒಟ್ಟು ಮೌಲ್ಯ ರೂ. 1,30,69,421.95 ಹೊಂದಿರುತ್ತದೆ. ಕೇಂದ್ರ ಕಛೇರಿಯ ನಿವೇಶನ ವಿಸ್ತೀರ್ಣ 48' × 35' ಅಡಿಗಳು ಇರುತ್ತದೆ. ಹಾಗೂ ಮೂಡಲಪಾಳ್ಯ ನಿವೇಶನದ ವಿಸ್ತೀರ್ಣ 30' × 40' ಅಡಿಗಳು ಇರುತ್ತದೆ.

**ಕಟ್ಟಡ :**

ಬ್ಯಾಂಕಿನ ಕೇಂದ್ರ ಕಛೇರಿ ಮಲ್ಲೇಶ್ವರದ ಹಾಗೂ ಬ್ಯಾಂಕಿನ ಶಾಖೆಗೆ ಮೂಡಲಪಾಳ್ಯದ ಕಟ್ಟಡದ ಮೌಲ್ಯದಲ್ಲಿ ಶೇ. 5 ರಂತೆ ರೂ. 4,33,135.00 ಸವಕಳಿ ತೆಗೆದಿದ್ದು ದಿನಾಂಕ 31.3.2024ಕ್ಕೆ ಕಟ್ಟಡದ ಮೌಲ್ಯ 82.30 ಲಕ್ಷ ಇರುತ್ತದೆ. ಕಟ್ಟಡಗಳ 2023–24ನೇ ಸಾಲಿನ ಕಂದಾಯ ರೂ. 1,08,761.00 ಗಳನ್ನು ವರದಿ ಸಾಲಿನಲ್ಲಿ ಪಾವತಿಸಿರುತ್ತಾರೆ. ಕಟ್ಟಡಕ್ಕೆ ವಿಮೆ ಮಾಡಿಸಿದ್ದು ಚಾಲ್ತಿಯಲ್ಲಿರುತ್ತದೆ. ಸ್ಥಿರಾಸ್ತಿಗಳ ಅಸಲು ದಾಖಲಾತಿಗಳು ಬ್ಯಾಂಕಿನಲ್ಲಿ ಲಭ್ಯವಿರುತ್ತದೆ.

**2. ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?**

ಪ್ರತ್ಯೇಕವಾಗಿ ಸ್ಥಿರಾಸ್ತಿ ರಿಜಿಸ್ಟರ್ ಕ್ರಮಬದ್ಧವಾಗಿ ಬರೆದಿಡಲಾಗಿದೆ.

**3. ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿವೆಯೇ?**

ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿದೆ.

**4. ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?**

ಸ್ಥಿರಾಸ್ತಿಗಳ ಮೇಲೆ ನ್ಯೂ ಇಂಡಿಯಾ ಅಶ್ಯೂರೆನ್ಸ್‌ರವರಲ್ಲಿ ವಿಮೆ ಮಾಡಿಸಿದ್ದು ಚಾಲ್ತಿಯಲ್ಲಿರುತ್ತದೆ.

**5. ಸ್ಥಿರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ.**

ಬ್ಯಾಂಕಿನ ಕಟ್ಟಡದ ಮೇಲೆ ಪದ್ಧತಿಯಂತೆ ರೂ 4,33,135.00 ಸವಕಳಿ ಮಾಡಲಾಗಿದೆ.

**6. ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ.**

ಬ್ಯಾಂಕು ಗೋಡಾನುಗಳನ್ನು ಹೊಂದಿರುವುದಿಲ್ಲ.

**7. ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿ ಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ?**

ಬ್ಯಾಂಕು ಯಾವುದೇ ಕಟ್ಟಡವನ್ನು ಬಾಡಿಗೆಗೆ ನೀಡಿರುವುದಿಲ್ಲ. ಪೂರ್ತಿ ಬ್ಯಾಂಕಿನ ಕಛೇರಿಗೆ ಉಪಯೋಗಿಸುತ್ತಿದ್ದಾರೆ.

**8. ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ ?**

ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ.

**9. ವರದಿ ಸಾಲಿನಲ್ಲಿ ವಿಲೇಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಷೆ.**

ವರದಿ ಸಾಲಿನಲ್ಲಿ ಯಾವುದೇ ಸ್ಥಿರಾಸ್ತಿ ವಿಲೇವಾರಿ ಮಾಡಿರುವುದಿಲ್ಲ.

**10. ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆಯೇ?**

ಎರಡು ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆ.

**ಬಿ. ಚರಾಸ್ತಿ:**

**1. ಸಂಘವು ಹೊಂದಿರುವ ಚರಾಸ್ತಿ ವಿವರಗಳು.**

ಬ್ಯಾಂಕು ದಿನಾಂಕ 31.03.2024ರ ಅಂತ್ಯಕ್ಕೆ ಈ ಕೆಳಕಂಡತೆ ಚರಾಸ್ತಿಗಳನ್ನು ಹೊಂದಿರುತ್ತದೆ.

ಎ. ಪೀಠೋಪಕರಣಗಳು: ರೂ. 20.26 ಲಕ್ಷ.

ಏ. ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್: ರೂ. 1.55 ಲಕ್ಷ.

ಐ. ವಾಹನ 9.80 ಲಕ್ಷ.

**2. ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?**

ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ.

**3. ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ?**

ಎಲ್ಲಾ ಚರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿದೆ.

**4. ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?**

ಚರಾಸ್ತಿಗಳ ಮೇಲೆ ವಿಮೆ ಮಾಡಿಸಿದ್ದು ಚಾಲ್ತಿಯಲ್ಲಿರುತ್ತದೆ.

**5. ಚರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ.**

ಚರಾಸ್ತಿಗಳ ಮೇಲೆ ನಿಯಮದಂತೆ ಅಂದರೆ ಪೀಠೋಪಕರಣಗಳ ಮೇಲೆ ಶೇ. 10ರಂತೆ ಹಾಗೂ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ಮೇಲೆ ಶೇ. 33.33ರ ಹಾಗೂ ವಾಹನಗಳ ಮೇಲೆ ಶೇ. 15% ರಷ್ಟು ಸವಕಳಿ ಮಾಡಲಾಗಿದೆ.

**ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಕೊಂಡಿರುವ ಕ್ರಮಗಳ ಕುರಿತು ವಿಮರ್ಷೆ.**

ವರದಿ ಸಾಲಿನಲ್ಲಿ ಬ್ಯಾಂಕು ಅನುಪಯುಕ್ತ ಚರಾಸ್ತಿಗಳನ್ನು ಹೊಂದಿರುವುದಿಲ್ಲ.

**6. ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಷೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ?**

ಬ್ಯಾಂಕಿನಲ್ಲಿ XUV 500 ಹಾಗೂ TUV 300 ವಾಹನಗಳಿದ್ದು, ಇವುಗಳ ಮೇಲೆ ಶೇ. 15ರಂತೆ ರೂ. 1,72,957.00ನ್ನು ಸವಕಳಿ ತೆಗೆದಿದ್ದು, ಸಾಲಾಖೈರಿಗೆ ರೂ. 9,80,092.00 ಬೆಲೆಯ ವಾಹನವಿರುತ್ತದೆ. ವಾಹನದ ವಿಮೆ ಮಾಡಿಸಿದ್ದು, ವಿಮಾ ಪಾಲಿಸಿ ಚಾಲ್ತಿಯಲ್ಲಿರುತ್ತದೆ. ವಾಹನದ ಚಲನವಲನದ ಬಗ್ಗೆ ರಿಜಿಸ್ಟರ್ ಇಟ್ಟಿದ್ದು ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ.

**7. ವರದಿ ಸಾಲಿನಲ್ಲಿ ವಿಲೇಮಾಡಿರುವ ವಾಹನದ ಕುರಿತು ವಿಮರ್ಷೆ.**

ಯಾವುದು ವಿಲೇವಾರಿ ಮಾಡಿರುವುದಿಲ್ಲ.

**8. ಬ್ಯಾಂಕೇತರ ಆಸ್ತಿಗಳು.**

ವರದಿ ಸಾಲಿನ ಅಂತ್ಯಕ್ಕೆ ಯಾವುದೇ ಬ್ಯಾಂಕೇತರ ಆಸ್ತಿಗಳು ಇರುವುದಿಲ್ಲ.

**(27) ಇತರೆ ಬರತಕ್ಕವುಗಳು:**

| ವಿವರ | ಮೊತ್ತ |
|---|---:|
| ಸಿಬ್ಬಂದಿ ಹಬ್ಬದ ಮುಂಗಡ | 1,90,500.00 |
| RBIನ DEAFನಿಂದ ಬರಬೇಕಾಗಿರುವುದು | 5,894.00 |
| SIDBI ಯಲ್ಲಿ ಖಾಯಂ ಠೇವಣಿ | 3,13,41,500.00 |
| **ಒಟ್ಟು ಮೊತ್ತ** | **3,15,37,894.00** |

**ಚೆಕ್ಕು, ಬಿಲ್ಲು, ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೋ ವಿವರಿಸಿ.**

ಚೆಕ್ಕು, ಬಿಲ್ಲು, ಡಿಸ್ಕೊಂಟ್ ವ್ಯವಹಾರ ಮಾಡಿರುವುದಿಲ್ಲ.

**ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು.**

ವರದಿ ಸಾಲಿನಲ್ಲಿ ಬ್ಯಾಂಕಿನಿಂದ ನೀಡಿರುವ ಸಾಲಗಳ ಮೇಲೆ ಬಡ್ಡಿ ರೂ. 1015.09 ಲಕ್ಷ ಹೂಡಿಕೆಗಳ ಮೇಲೆ ಬಂದ ಬಡ್ಡಿ ರೂ. 452.20 ಲಕ್ಷ ಹಾಗೂ ಇತರೆ ಆದಾಯ ರೂ. 37.27 ಲಕ್ಷ ಜಮಾ ಬಂದಿರುತ್ತದೆ. ದಿನಾಂಕ 31.3.2024ಕ್ಕೆ ಬ್ಯಾಂಕ್ ಹೊಂದಿರುವ ವಿವಿಧ ಠೇವಣಿಗಳ ಮೇಲೆ ಪಾವತಿಸಬೇಕಾಗಿರುವ ಬಡ್ಡಿ ಬಾಬ್ತಿಗೆ ಒಟ್ಟು ರೂ. 87.60 ಲಕ್ಷ ಪಾವತಿಗಾಗಿ ಜವಾಬ್ದಾರಿಯಲ್ಲಿ ಕಾಯ್ದಿರಿಸಲಾಗಿದೆ.

ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ರೂ. 825.59 ಲಕ್ಷ ಬಡ್ಡಿ ಪಾವತಿಸಲಾಗಿದೆ. ಆಯ್ದ ಕೆಲವೊಂದು ಠೇವಣಿಗಳ ಖಾತೆಗಳ ಮೇಲೆ ಪಾವತಿಸಿರುವ ಬಡ್ಡಿ ಪರಿಶೀಲಿಸಿದ್ದು ಆಡಳಿತ ಮಂಡಳಿಯು ಕಾಲಕಾಲಕ್ಕೆ ತೆಗೆದುಕೊಂಡಿರುವ ತೀರ್ಮಾನದಂತೆ ಠೇವಣಿಗಳ ಮೇಲೆ

ಬಡ್ಡಿ ಪಾವತಿಸಿರುವುದು ಸರಿಯಾಗಿರುತ್ತದೆ ಹಾಗೂ ವಿವಿಧ ಸಾಲಗಳ ಮೇಲೆ ಬಂದಿರುವ ಬಡ್ಡಿಯನ್ನು ಆಯ್ದ ಕೆಲವೊಂದು ಖಾತೆಗಳಲ್ಲಿ ಪರಿಶೀಲಿಸಿದ್ದು ಸರಿಯಾಗಿರುತ್ತದೆ.

**ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ?**

ಹೊಂದಾಣಿಕೆ ಖಾತೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

**(28) ಮೋಸ, ವಂಚನೆ, ಹಣ ದುರುಪಯೋಗದ ವರದಿ.**

ಬ್ಯಾಂಕಿನಲ್ಲಿ ವರದಿ ಸಾಲಿನಲ್ಲಿ ಯಾವುದೇ ರೀತಿಯ ಮೋಸ, ವಂಚನೆ, ಹಣ ದುರುಪಯೋಗ ನಡೆದಿರುವುದಿಲ್ಲ.

**(29) ನಿಬಂಧಕರ ಆದೇಶಗಳ ಅನುಪಾಲನೆ.**

ಬ್ಯಾಂಕಿನಲ್ಲಿ ಕಲಂ 64, ಕಲಂ 65 ಹಾಗೂ ಕಲಂ 68ರ ಅಡಿ ವಿಚಾರಣೆ ನಡೆದಿರುವುದಿಲ್ಲ. ವರದಿ ಸಾಲಿನಲ್ಲಿ ನಿಬಂಧಕರಿಂದ ಯಾವುದೇ ವಿಚಾರಣೆ ಇರುವುದಿಲ್ಲ.

**ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು:–**

ಬ್ಯಾಂಕಿನ ಉಪನಿಯಮದ ಪ್ರಕಾರ ಒಟ್ಟು 13 ಜನ ನಿರ್ದೇಶಕರು ಇರಬೇಕಾಗಿದ್ದು. 13 ಜನ ನಿರ್ದೇಶಕರು ಇರುತ್ತಾರೆ. ಆಡಳಿತ ಮಂಡಳಿಯ ಚುನಾವಣೆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಮೀಸಲಾತಿಯ ಅನ್ವಯ ಎರಡು ಸ್ಥಾನಗಳನ್ನು ಮಹಿಳೆಯರಿಗೆ, ಎರಡು ಸ್ಥಾನಗಳನ್ನು ಹಿಂದುಳಿದ ವರ್ಗದವರಿಂದ ಹಾಗೂ ಒಂದು ಸ್ಥಾನವನ್ನು ಪರಿಶಿಷ್ಠ ಜಾತಿಗೆ ಹಾಗೂ ಒಂದು ಸ್ಥಾನವನ್ನು ಪರಿಶಿಷ್ಠ ವರ್ಗಕ್ಕೆ ಸೇರಿದವರಿಂದ ಭರ್ತಿ ಮಾಡಲಾಗಿದೆ. ಪ್ರಸಕ್ತ ಮಂಡಳಿಗೆ ಚುನಾವಣೆಯು ದಿನಾಂಕ 02.02.2020ರಂದು ನಡೆದಿದ್ದು ಇವರ ಅವಧಿಯು 5ವರ್ಷಗಳಿಗೆ ಮುಕ್ತಾಯವಾಗಲಿದೆ (2020–2025). ಪ್ರಸಕ್ತ ಸಾಲಿನಲ್ಲಿ 12 ಮಂಡಳಿ ಸಭೆಗಳು ನಡೆದಿರುತ್ತದೆ. ಮುಖ್ಯ ಸಮಿತಿ ಹಾಗೂ ಉಪಸಮಿತಿಗಳಿಗೆ ಸದರಿ ವರ್ಷದಲ್ಲಿ ರೂ. 4.10 ಲಕ್ಷ ಸಭಾ ಭತ್ಯೆ ಹಾಗೂ ಸಾರಿಗೆ ಭತ್ಯೆ ವೆಚ್ಚ ಖರ್ಚಾಗಿರುತ್ತದೆ. ಆಡಳಿತ ಮಂಡಳಿಯ ಸಭೆಗಳಲ್ಲಿ ಬ್ಯಾಂಕಿನ ಅಭಿವೃದ್ದಿಗೆ ಪೂರಕವಾದ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ ಹಾಗೂ RBIನಿಂದ ನೀಡುವ ನಿರ್ದೇಶನಗಳನ್ನು ಹಾಗೂ ಇಲಾಖಾ ನಿರ್ದೇಶನಗಳನ್ನು ಜಾರಿ ಮಾಡುವ ಬಗ್ಗೆ ಸಮಿತಿಯಲ್ಲಿ ಚರ್ಚಿಸಿ ಕ್ರಮವಿಡಲಾಗಿದೆ.

**(30) ಬ್ಯಾಂಕಿನ ಆಡಳಿತ : ನಿರ್ದೇಶಕರ ಸಭಾ ಹಾಜರಾತಿ**

ದಿನಾಂಕ 31.03.2024ಕ್ಕೆ ಈ ಕೆಳಕಂಡ ಆಡಳಿತ ಮಂಡಳಿ ಅಸ್ತಿತ್ವದಲ್ಲಿರುತ್ತದೆ. 2023–24ನೇ ಸಾಲಿನಲ್ಲಿ ಒಟ್ಟು 12 ಆಡಳಿತ ಮಂಡಳಿ ಸಭೆಗಳು ಜರುಗಿರುತ್ತದೆ. ಆಡಳಿತ ಮಂಡಳಿ ಸಭೆಗಳಿಗೆ ಹಾಜರಾದ ನಿರ್ದೇಶಕರ ವಿವರ ಈ ಕೆಳಕಂಡಂತಿದೆ.

| ನಿರ್ದೇಶಕರ ಹೆಸರು ಶ್ರೀಯುತರುಗಳಾದ | ಹುದ್ದೆ | ಹಾಜರಾದ ಆಡಳಿತ ಮಂಡಳಿ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|
| **ಎಸ್.ಕೆ. ಕರಿಯಪ್ಪ ಗೌಡ** | ಅಧ್ಯಕ್ಷರು | 12 | ಆ.ಮ. ಸಭೆ ಹಾಗೂ ಉಪಸಮಿತಿಗಳ ಸಭಾಭತ್ಯೆ ಹಾಗೂ ಸಾರಿಗೆ ಭತ್ಯೆ ಸೇರಿ ಒಟ್ಟು ರೂ. 4,10,059.00ಗಳನ್ನು ವರದಿ ಸಾಲಿನಲ್ಲಿ ಪಾವತಿ ಮಾಡಲಾಗಿದೆ. |
| **ಟಿ.ಎಸ್. ಗಂಗನರಸಿಂಹಯ್ಯ** | ಉಪಾಧ್ಯಕ್ಷರು | 12 | |
| **ಎಲ್. ಕೃಷ್ಣಪ್ಪ** | ನಿರ್ದೇಶಕರು | 12 | |
| **ಬಿ. ಬೋರೇಗೌಡ** | ನಿರ್ದೇಶಕರು | 05 | |
| **ಡಿ. ದೇವರಾಜು** | ನಿರ್ದೇಶಕರು | 12 | |
| **ಎ. ಸದಾನಂದ** | ನಿರ್ದೇಶಕರು | 12 | |
| **ಎಲ್. ಲಿಂಗರಾಜು** | ನಿರ್ದೇಶಕರು | 12 | |
| **ಪಿ.ಆರ್. ದೇವರಾಜು** | ನಿರ್ದೇಶಕರು | 11 | |
| **ಎಲ್. ಕರೀಗೌಡ** | ನಿರ್ದೇಶಕರು | 11 | |
| **ಲೀಲಾವಾಸುದೇವ್** | ನಿರ್ದೇಶಕರು | 11 | |
| **ಜೆ. ವಿಜಯಲಕ್ಷ್ಮಿ** | ನಿರ್ದೇಶಕರು | 12 | |
| **ಗುರುಮಲ್ಲಮ್ಮ** | ನಿರ್ದೇಶಕರು | 10 | |
| **ಪುಷ್ಪ ಎಫ್.** | ನಿರ್ದೇಶಕರು | 11 | |
| **ಎಸ್.ಕೆ. ವಿಶ್ವನಾಥ್** | ನಿರ್ದೇಶಕರು | 02 | |

**ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ:–**

**ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ?**

ಆಡಳಿತ ಮಂಡಳಿ ಮತ್ತು ಜನರಲ್ ಮ್ಯಾನೇಜರ್‌ರವರ ಕಾರ್ಯಕ್ಷಮತೆಯು ತೃಪ್ತಿಕರವಾಗಿರುತ್ತದೆ. ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆ. ವರದಿಸಾಲಿನಲ್ಲಿ ಒಟ್ಟು 12 ಸಭೆಗಳು ನಡೆದಿರುತ್ತದೆ ಹಾಗೂ ಅವಶ್ಯಕ ಉಪ ಸಮಿತಿಗಳನ್ನು ರಚಿಸಿ ಅವುಗಳ ಸಭೆಗಳು ನಿಯಮಿತವಾಗಿ ನಡೆದಿರುತ್ತದೆ. RBIನ ನಿರ್ದೇಶನದಂತೆ BOM ರಚನೆಯಾಗಿ ಸಭೆಗಳು ನಡೆದಿರುತ್ತದೆ.

**ಬ್ಯಾಂಕಿನ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ?**

ಬ್ಯಾಂಕಿನ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿ ಆಡಳಿತ ಮಂಡಳಿ ಸಭೆಗಳನ್ನು ನಡೆಸಿರುತ್ತಾರೆ.

**ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ.**

ಆಡಳಿತ ಮಂಡಲಿ ಸಭೆಯಲ್ಲಿ ಸದಸ್ಯರಿಗೆ ವಿತರಿಸಿದ ಸಾಲ / ಮಂಜೂರು ಮಾಡಿದ ಸಾಲಗಳ ಬಗ್ಗೆ, ಹೊಸ ಷೇರು ದಾರರನ್ನು ತೆಗೆದುಕೊಳ್ಳುವುದು, ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟವರನ್ನು ಅಂಗೀಕರಿಸುವುದು. ಗುಂತಾವಣಿ ಮಾಡುವುದು, ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ಅನುಮೋದಿಸುವುದು ಇತ್ಯಾದಿ ನಿರ್ಣಯಗಳನ್ನು ತೆಗೆದುಕೊಂಡಿರುತ್ತಾರೆ. ಒಟ್ಟಾರೆ ಪರಿಶೀಲನೆಯ ಪ್ರಕಾರ ಆಡಳಿತ ಮಂಡಳಿಯ ಕಾರ್ಯನಿರ್ವಹಣೆಯು ತೃಪ್ತಿದಾಯಕವಾಗಿರುತ್ತದೆ. ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಯನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗುತ್ತಿದೆ. ನಡಾವಳಿಗಳಲ್ಲಿ ಬ್ಯಾಂಕಿನ ಅಭಿವೃದ್ಧಿ ಪೂರಕ ವಿಷಯಗಳನ್ನು ಚರ್ಚಿಸಿದ್ದು ಎಲ್ಲಾ ಅವಶ್ಯಕ ಮಾಹಿತಿಗಳನ್ನು ಅಳವಡಿಸಿಕೊಂಡಿದ್ದು ಕ್ರಮಬದ್ಧವಾಗಿ ದಾಖಲಿಸಿರುತ್ತಾರೆ. ಒಟ್ಟಾರೆ ಪರಿಶೀಲನೆಯ ಪ್ರಕಾರ ಆಡಳಿತ ಮಂಡಲಿಯ ಕಾರ್ಯನಿರ್ವಹಣೆಯು ತೃಪ್ತಿದಾಯಕವಾಗಿರುತ್ತದೆ.

**ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ:–**

**ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ?**

ನಿರ್ದೇಶಕರಿಗೆ ಯಾವುದೇ ಸಾಲ ನೀಡಿರುವುದಿಲ್ಲ.

**ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ?**

ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆ.

**ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ.**

ಯಾವುದು ಇರುವುದಿಲ್ಲ.

**ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ.**

ಯಾವುದು ಇರುವುದಿಲ್ಲ.

**ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ.**

ಅನ್ವಯವಾಗುವುದಿಲ್ಲ.

**(31) ವಾರ್ಷಿಕ ಸಾಮಾನ್ಯ ಸಭೆ:**

1. **ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ**

   2022–23ನೇ ಸಾಲಿನ ವಾರ್ಷಿಕ ಸಭೆಯು ದಿನಾಂಕ 10.09.2023 ರಂದು ನಡೆದಿರುತ್ತದೆ.

2. **ಬ್ಯಾಂಕಿನ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ.**

   2022–23ನೇ ಸಾಲಿನ ವಾರ್ಷಿಕ ಮಹಾಸಭೆಗೆ ಬ್ಯಾಂಕಿನ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕನಿಷ್ಠ ಕೋರಂ 795 ಜನ ಸದಸ್ಯರು ಆಗಿದ್ದು, ಸಭೆಯ ಪ್ರಾರಂಭದಲ್ಲಿ 1140 ಜನ ಸದಸ್ಯರು ಹಾಜರಿರುತ್ತಾರೆ.

3. **ಸಭಾ ನಡಾವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ.**

   ಸಭಾ ನಡಾವಳಿಯನ್ನು ಪರಿಶೀಲಿಸಲಾಗಿದೆ ಮತ್ತು ಸಭಾ ನಡಾವಳಿಗಳನ್ನು ಬರೆದಿಡಲಾಗಿದೆ. ಇದರ ಪ್ರತಿಯನ್ನು ಹಾಗೂ ಅನುಪಾಲನಾ ವರದಿಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಲಾಗಿದೆ.

**4. ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಕಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ?**

ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

**5. ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?**

ಮುಂದಿನ ವರ್ಷದ ಆಯವ್ಯಯ ಪತ್ರವನ್ನು ಮಂಡಿಸಿ ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

**6. ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೆ?**

ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

**7. ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ? ನೇಮಕ ಮಾಡಿದಲ್ಲಿ ಲೆಕ್ಕ ಪರಿಶೋಧಕರ ಹೆಸರು/ಪದನಾಮ ಹಾಗೂ ಠರಾವಿನ ಕ್ರಮಾಂಕ ಹಾಗೂ ವಾರ್ಷಿಕ ಮಹಾಸಭೆಯ ದಿನಾಂಕ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ವರದಿಸಿದ ದಿನಾಂಕ.**

ಬ್ಯಾಂಕಿನ 2023–24ನೇ ಸಾಲಿನ ಶಾಸನ ಬದ್ದ ಲೆಕ್ಕ ಪರಿಶೋಧನೆಯನ್ನು ಮಾಡಿಸಿಕೊಳ್ಳಲು RBI ರವರು M/s. BRR & Co., ಚಾಟರ್ಡ್ ಅಕೌಂಟೆಂಟ್ಸ್ ರವರನ್ನು ಅನುಮೋದಿಸಿ approval ನೀಡಿದ್ದು ಸದರಿಯವರನ್ನು ಶಾಸನ ಬದ್ದ ಲೆಕ್ಕ ಪರಿಶೋಧಕರನ್ನಾಗಿ 2023–24ನೇ ಸಾಲಿಗೆ ನೇಮಿಸಿದೆ.

**8. ವಾರ್ಷಿಕ ಸಭೆಯ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ.**

ವಾರ್ಷಿಕ ಮಹಾ ಸಭೆಯಲ್ಲಿ ಮುಖ್ಯ ವಿಷಯಗಳನ್ನು ಚರ್ಚಿಸಿ ನಡಾವಳಿಗಳನ್ನು ಕ್ರಮಬದ್ದವಾಗಿ ನಿರ್ವಹಿಸಲಾಗಿದೆ. 2022–23ನೇ ಸಾಲಿನ ವಾರ್ಷಿಕ ಮಹಾ ಸಭೆ ದಿನಾಂಕ 10.09.2023 ರಂದು ಜರುಗಿರುತ್ತದೆ. ಸದರಿ ಸಭೆಯಲ್ಲಿ ವಾರ್ಷಿಕ ವರದಿ, ಆಸ್ತಿ–ಜವಾಬ್ದಾರಿ ಪಟ್ಟಿ, ಲಾಭ – ನಷ್ಟ ಪಟ್ಟಿ, ಲೆಕ್ಕ ಪರಿಶೋಧನಾ ವರದಿ, ನಿವ್ವಳ ಲಾಭ ವಿಲೇವಾರಿ, ಆಯವ್ಯಯದ ಅನುಮೋಧನೆ, ಇತ್ಯಾದಿ ಮುಖ್ಯ ವಿಷಯಗಳನ್ನು ಚರ್ಚಿಸಲಾಗಿದೆ.

**(32) ಸಿಬ್ಬಂದಿ ವರ್ಗ:**

**1. ಸಂಘದಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ.**

ಬ್ಯಾಂಕಿನಲ್ಲಿ ಒಟ್ಟು ಮಂಜೂರಾದ, ಸಿಬ್ಬಂದಿಗಳ ಸಂಖ್ಯೆ 56 ಆಗಿದ್ದು ಇದರಲ್ಲಿ 29 ಜನ ಸಿಬ್ಬಂದಿಗಳು ಖಾಯಂ ನೌಕರರಾಗಿ ವರದಿ ಸಾಲಿನ ಅಂತ್ಯಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ.

**2. ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸುರುವ ಬಗ್ಗೆ.**

ಬ್ಯಾಂಕಿನ ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದ ವೇತನಶ್ರೇಣಿ ನೀಡಲಾಗಿದೆ. ಬ್ಯಾಂಕಿನಲ್ಲಿ ಸಿಬ್ಬಂದಿ ಸೇವಾನಿಯಮ ರಚಿಸಿಕೊಂಡು ವ್ಯವಹರಿಸುತ್ತಿದ್ದಾರೆ ಹಾಗೂ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರುತ್ತಾರೆ.

**3. ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ.**

ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ.

**4. ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು.**

ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ವಿವರದ ಪಟ್ಟಿ ಬ್ಯಾಂಕಿನಲ್ಲಿ ಲಭ್ಯವಿದ್ದು ಪರಿಶೀಲಿಸಿದ್ದು ಕ್ರಮಬದ್ಧವಾಗಿರುತ್ತದೆ.

**5. ಸಿಬ್ಬಂದಿಯಿಂದ ನಿಬಂದಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ:**

ಸಿಬ್ಬಂದಿಯಿಂದ ಭದ್ರತೆ ಠೇವಣೆ ಪಡೆಯಲಾಗಿದೆ.

**6. ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು.**

ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳ ಮೊತ್ತ ರೂ. 285.91 ಲಕ್ಷ ಆಗಿದೆ.

**7. ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ.**

ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ 1.64 ಆಗಿದ್ದು ಇದು ನಿಗದಿತ ಮಿತಿಯಲ್ಲಿಯೇ ಇರುತ್ತದೆ.

**8. ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು.**

ವರದಿ ಸಾಲಿನಲ್ಲಿ ಖಾಯಂ ನೌಕರರನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ.

**9. ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು.**

ಪ್ರತಿ ವರ್ಷದಂತೆ ಸಿಬ್ಬಂದಿಗಳಿಗೆ ರೂ 17.50 ಲಕ್ಷ ಎಕ್ಸ್‌ಗ್ರೇಷಿಯಾ ಆಗಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

**10. ಸಿಬ್ಬಂದಿ ವಿವರಗಳು ಬ್ಯಾಂಕಿನ ದಾಖಲೆಗಳಿಗೆ ತಾಳೆಯಾಗುತ್ತವೆಯೇ?**

ತಾಳೆ ಇರುತ್ತದೆ. ಸಿಬ್ಬಂದಿಗಳ ವಿವರವಾದ ಪಟ್ಟಿ ಬ್ಯಾಂಕಿನಲ್ಲಿ ಲಭ್ಯವಿರುತ್ತದೆ.

**11. ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ?**

ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ಮಿತಿಯೊಳಗಿದೆ.

ಬ್ಯಾಂಕಿನ ಸಿಬ್ಬಂದಿಗಳಿಗೆ ಆಗಾಗ್ಗೆ RBI ಹಾಗೂ ಸಹಕಾರ ಇಲಾಖೆಯ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಿದೆ.

ಬ್ಯಾಂಕಿನ ಠೇವಣಿ ಪ್ರತಿ ಸಿಬ್ಬಂದಿಗೆ ರೂ. 478.10 ಲಕ್ಷ ಇರುತ್ತದೆ. ಬ್ಯಾಂಕಿನ ಸಾಲ ಪ್ರತಿ ಸಿಬ್ಬಂದಿಗೆ ರೂ. 318.16 ಲಕ್ಷ ಇರುತ್ತದೆ. ಬ್ಯಾಂಕಿನ ನಿವ್ವಳ ಲಾಭ ಪ್ರತಿ ಸಿಬ್ಬಂದಿಗೆ ರೂ. 3.72 ಲಕ್ಷ ಇರುತ್ತದೆ. ಬ್ಯಾಂಕಿನ ಸಿಬ್ಬಂದಿ ವೇತನದಲ್ಲಿ ಕಡಿತ ಮಾಡಿರುವ ಭವಿಷ್ಯ ನಿಧಿ, ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಯನ್ನು ನಿಗಧಿತ ದಿನಾಂಕದೊಳಗೆ ಸಂಬಂಧ ಪಟ್ಟ ಇಲಾಖೆಗೆ ಪಾವತಿಸಿರುತ್ತಾರೆ. ಕಾಲಕಾಲಕ್ಕೆ RBI ರವರು, UCB ಫೆಡರೇಷನ್‌ರವರು ಸಹಕಾರೇತರ ಸಂಸ್ಥೆಗಳು ಹಮ್ಮಿಕೊಳ್ಳುವ ತರಬೇತಿ ಕಾರ್ಯಕ್ರಮಕ್ಕೆ ಬ್ಯಾಂಕಿನ ಸಿಬ್ಬಂದಿ ಪ್ರತಿನಿಧಿಸಿರುತ್ತಾರೆ.

## ಬ್ಯಾಂಕಿನ ಆರ್ಥಿಕ ಫಲಿತಾಂಶಗಳ ವಿವರಗಳು

**ಹಣಕಾಸಿನ ವರದಿಯ ವಿಶ್ಲೇಷಣೆ:–** **ಕೋಟಿಗಳಲ್ಲಿ**

| | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ಬ್ಯಾಂಕಿನ ಒಟ್ಟು ವಹಿವಾಟು | 175.69 | 182.30 |
| ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳ | 169.73 | 173.27 |
| ಬ್ಯಾಂಕಿನ ಒಟ್ಟು ಆದಾಯ | 15.05 | 14.85 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | 1.08 | 1.05 |

**(33) ತಲಾ ಷೇರಿನ ಗಳಿಕೆ**

| | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ನಿವ್ವಳ ಲಾಭ | 1,07,85,164.98 | 1,04,65,190.55 |
| ಒಟ್ಟು ಷೇರುಗಳು | 484329 | 492381 |
| ತಲಾ ಷೇರಿನ ಗಳಿಕೆ | ರೂ. 22.27 | ರೂ. 21.25 |

**ಶಾಖೆಗಳು :–** **ಲಕ್ಷಗಳಲ್ಲಿ**

| ಶಾಖೆ | ಒಟ್ಟು ಲಾಭ | ನಿವ್ವಳ ಲಾಭ | ಠೇವಣಿಗಳು | ಸಾಲಗಳು | ಶಾಖಾ ಹೊಂದಾಣಿಕೆ |
|---|---|---|---|---|---|
| ಮಲ್ಲೇಶ್ವರಂ | 1349.99 | 92.36 | 12443.92 | 7942.99 | 368.01 |
| ಶಾಖೆ | 154.57 | 15.49 | 1421.04 | 1283.74 | 368.01 |

**ಎ) ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ:**

**1. ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ, ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು.**

ಪ್ರತಿ ತಿಂಗಳ ಅಂತ್ಯಕ್ಕೆ ಕೇಂದ್ರ ಕಛೇರಿಯವರು ಹಾಗೂ ಶಾಖೆಯವರು ಪ್ರತಿ ಮಾಹೆ ಸಮನ್ವಯವನ್ನು ಮಾಡುತ್ತಿದ್ದಾರೆ. ಯಾವುದೇ ಅಸಾಮಾನ್ಯ ನಮೂದುಗಳು ಇರುವುದಿಲ್ಲ. ಬ್ಯಾಂಕಿನ ವ್ಯವಹಾರಗಳೆಲ್ಲಾ ಗಣಕಿಕೃತವಾಗಿದೆ. ಬ್ಯಾಂಕಿನ ಲೆಕ್ಕಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ತರಲಾಗಿದೆ.

**2. ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ.**

ಕೇಂದ್ರ ಕಛೇರಿಯಲ್ಲಿನ ಶಾಖಾ ಬಾಕಿ ಮೊತ್ತವನ್ನು ಶಾಖೆಯಲ್ಲಿರುವ ಕೇಂದ್ರ ಕಛೇರಿಯ ಬಾಕಿ ಮೊತ್ತಕ್ಕೆ ಪ್ರತೀ ತಿಂಗಳ ಅಂತ್ಯಕ್ಕೆ ಸಮನ್ವಯ ಮಾಡುತ್ತಿದ್ದು ದೀರ್ಘಕಾಲದ ನಮೂದುಗಳು ಯಾವುದೂ ಇರುವುದಿಲ್ಲ.

| | |
|---|---|
| ಕೇಂದ್ರ ಕಛೇರಿಯ ಲೆಕ್ಕದನ್ವಯ ಶಾಖೆಯ ಲೆಕ್ಕದಲ್ಲಿ | ರೂ. 368.01 ಲಕ್ಷ |
| ಶಾಖೆಯ ಲೆಕ್ಕದನ್ವಯ ಕೇಂದ್ರ ಕಛೇರಿಯ ಲೆಕ್ಕದಲ್ಲಿ | ರೂ. 368.01 ಲಕ್ಷ |
| ಅಂತರ | ಇಲ್ಲ |

**3. ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು.**

ಪ್ರತಿ ತಿಂಗಳ ಅಂತ್ಯಕ್ಕೆ ಸಮನ್ವಯಗೊಳಿಸಲಾಗಿದೆ ಹಾಗೂ ತಾಳೆ ಇರುತ್ತದೆ. ಹಳೆಯ ಲೆಕ್ಕಗಳು ಮುಂದುವರೆದಿರುವುದಿಲ್ಲ. ಸಮನ್ವಯ ಪಟ್ಟಿಯು ಆಸ್ತಿ – ಜವಾಬ್ದಾರಿಯ ಮೊತ್ತಕ್ಕೆ ತಾಳೆಯಾಗಿರುತ್ತದೆ.

**ಬಿ) ಶಾಖೆಗಳ ಪರಿವೀಕ್ಷಣೆ:**

**1. ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ.**

ಶಾಖಾ ಪರಿವೀಕ್ಷಣೆಯ ಬಗ್ಗೆ ಆಡಳಿತ ಮಂಡಳಿಯು ಒಂದು ಉಪಸಮಿತಿಯನ್ನು ರಚಿಸಿದ್ದು, ಸಮಿತಿಯು ಆಗಾಗ್ಗೆ ಶಾಖೆಯ ವ್ಯವಹಾರವನ್ನು ಪರಿಶೀಲನೆ ಮಾಡುತ್ತಿದೆ. ಚಾರ್ಟೆಡ್ ಅಕೌಂಟಂಟ್‌ರವರಿಂದ ಸಮವರ್ತಿ ಲೆಕ್ಕ ಪರಿಶೋಧನೆ ನಡೆಯುತ್ತಿದೆ. ಬ್ಯಾಂಕಿನ ಅಧಿಕಾರಿಗಳು ಶಾಖೆಗೆ ಭೇಟಿ ನೀಡಿ ನಗದು, ಅಡವಿಟ್ಟ ಚಿನ್ನಾಭರಣ ಹಾಗೂ ಶಾಖೆಯ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸಿರುತ್ತಾರೆ.

**2. ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ.**

ಅನುಪಾಲನ ವರದಿಯನ್ನು ಪಡೆಯುವ ಪದ್ಧತಿಯನ್ನು ಅಳವಡಿಸಿಕೊಳ್ಳುವುದು.

**3. ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ?**

ವಿಳಂಬವಿಲ್ಲದೆ ಶಾಖಾ ನಿಯತಕಾಲಿಕೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುತ್ತಿದ್ದಾರೆ.

**4. ಹೊಂದಾಣಿಕೆ ಲೆಕ್ಕಗಳ ಬಗ್ಗೆ – "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ" – ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ.**

ದಿನಾಂಕ 31.3.2024ಕ್ಕೆ ಶಾಖೆಯ ಮತ್ತು ಕೇಂದ್ರ ಕಛೇರಿಯ ಲೆಕ್ಕಗಳಲ್ಲಿ ಹೊಂದಾಣಿಕೆ ತಾಳೆಯಾಗಿರುತ್ತದೆ. ಪ್ರತಿ ಮಾಹೆ ಸಮನ್ವಯ ತಃಖ್ತೆಯನ್ನು ತಯಾರಿಸಿದ್ದು, ವರದಿ ಸಾಲಿನ ಅಂತ್ಯಕ್ಕೆ ಇದ್ದಂತೆ ಸಮನ್ವಯ ತಃಖ್ತೆಯನ್ನು ತಯಾರಿಸಿದ್ದು ತಾಳೆ ಇರುತ್ತದೆ. ಬ್ಯಾಂಕಿನಲ್ಲಿ ದಿನಾಂಕ 31.3.2024ರ ಅಂತ್ಯಕ್ಕೆ ಅಮಾನತ್ತು ಖಾತೆಯಲ್ಲಿ ರೂ 0.17 ಲಕ್ಷ ಜವಾಬ್ದಾರಿಯಲ್ಲಿದ್ದು ಷೆಡ್ಯೂಲ್ ತಾಳೆಯಿರುತ್ತದೆ. ಹಳೆಯ ಹಾಗೂ ಅಸಾಮಾನ್ಯ ನಮೂದುಗಳು ಕಂಡು ಬಂದಿರುವುದಿಲ್ಲ.

**ಇತರೆ ಷರಾ/ ಇತರೆ ವಿಷಯಗಳು:**

**1. ಲೆಕ್ಕನಿರ್ವಹಣಾ ಕಾರ್ಯನೀತಿ/ ಅದು ಲೆಕ್ಕನಿರ್ವಹಣಾ ಪ್ರಮಾಣಕ್ಕನುಗುಣವಾಗಿದೆಯೇ?**

ಬ್ಯಾಂಕಿನ ಲೆಕ್ಕಗಳನ್ನು ಗಣಕಯಂತ್ರಕ್ಕೆ ಅಳವಡಿಸಿದ್ದು, ಇದು ಲೆಕ್ಕನಿರ್ವಹಣಾ ಕಾರ್ಯನೀತಿ / ಲೆಕ್ಕನಿರ್ವಹಣಾ ಪ್ರಮಾಣಕ್ಕನುಗುಣವಾಗಿದೆ.

**2. ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು.**

ಯಾವುದೇ ಗಮನಾರ್ಹ ಅಂಶಗಳು ಕಂಡು ಬಂದಿರುವುದಿಲ್ಲ.

**3. ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ.**

ಬ್ಯಾಂಕು ಇತರೇ ಬ್ಯಾಂಕುಗಳಲ್ಲಿ ಹೊಂದಿರುವ ಚಾಲ್ತಿ ಖಾತೆಗಳ ಲೆಕ್ಕಗಳು ಸಮನ್ವಯ ಪಟ್ಟಿಗೆ ಒಳ ಪಟ್ಟು ತಾಳೆಯಾಗಿರುತ್ತದೆ. ಬ್ಯಾಂಕು ಬೇರೆ ಬ್ಯಾಂಕುಗಳಲ್ಲಿ ಹೊಂದಿರುವ ಖಾತೆಗಳ ಸಮನ್ವಯ ಪಟ್ಟಿಯನ್ನು ಪ್ರತಿ ಮಾಹೆ ತಯಾರಿಸಿದ್ದು, ಪರಿಶೀಲಿಸಲಾಗಿದೆ. ಈ ಬಗ್ಗೆ ವಿವಿಧ ಬ್ಯಾಂಕುಗಳಿಂದ ನೀಡಿರುವ ದೃಢೀಕರಣ ಪತ್ರವನ್ನು ಪರಿಶೀಲಿಸಲಾಗಿದ್ದು ತಾಳೆ ಇರುತ್ತದೆ.

**4. NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವಾರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ದತಿ ಬಗ್ಗೆ.**

ಈ ತರಹದ ವ್ಯವಹಾರವು ಇರುವುದಿಲ್ಲ, ಆದುದರಿಂದ ಅನ್ವಯಿಸುವುದಿಲ್ಲ.

**5. CRAR ನ ಬಗ್ಗೆ ವಿಶ್ಲೇಷಣೆ.**

ಭಾರತೀಯ ರಿಸರ್ವ್ ಬ್ಯಾಂಕಿನವರು ನೀಡಿರುವ ಸುತ್ತೋಲೆಯಂತೆ ಸಿ.ಆರ್.ಎ.ಆರ್. ಪ್ರಮಾಣವು ದಿನಾಂಕ 31.3.2024ರ ಅಂತ್ಯಕ್ಕೆ ಕನಿಷ್ಠ ಶೇ. 9ರ ಪ್ರಮಾಣದಲ್ಲಿ ಇರಬೇಕಾಗಿದ್ದು ವರದಿ ಸಾಲಿನ ಅಂತ್ಯಕ್ಕೆ ಸಿ.ಆರ್.ಎ.ಆರ್. ಪ್ರಮಾಣವು ಶೇ. 18.69% ರಷ್ಟು ಇದ್ದು, ಆರ್.ಬಿ.ಐ. ನಿಗದಿಪಡಿಸಿದ ಮಿತಿಗಿಂತ ಹೆಚ್ಚಿಗೆ ಇರುತ್ತದೆ.

**6. ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ.**

ವರದಿ ಸಾಲಿನಲ್ಲಿ ದಾನಧರ್ಮದ ನಿಧಿಯಿಂದ ಶೇ. 1% ಕ್ಕಿಂತ ಹೆಚ್ಚಿಗೆ ದಾನ ನೀಡಿರುವುದಿಲ್ಲ.

**7. ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ.**

ಬ್ಯಾಂಕು ಆಡಳಿತ ಮಂಡಳಿ ತೀರ್ಮಾನದಂತೆ, ಠೇವಣಿ ಮತ್ತು ಸಾಲಗಳಿಗೆ ವಿಧಿಸುತ್ತಿರುವ ಬಡ್ಡಿ ಸ್ಪರ್ಧಾತ್ಮಕವಾಗಿದ್ದು ಇದು ಬ್ಯಾಂಕಿನ ಆರ್ಥಿಕತೆಯ ದೃಷ್ಟಿಯಿಂದ ಸಮರ್ಪಕವಾಗಿದೆ. ಕಡಿಮೆ ವೆಚ್ಚದ ಠೇವಣಿಗಳನ್ನು ಹೆಚ್ಚಿಸಲು ಕ್ರಮವಿಟ್ಟಲ್ಲಿ ಬ್ಯಾಂಕಿನ ಲಾಭ ಹೆಚ್ಚುವ ಅವಕಾಶವಿದೆ. ಬ್ಯಾಂಕಿನ ಆರ್ಥಿಕಸ್ಥಿತಿಯ ತಕ್ಕಂತೆ ಠೇವಣಿ ಬಡ್ಡಿಯ ದರವನ್ನು ಆಗಾಗ್ಗೆ ಪರಿಷ್ಕರಿಸುವುದು.

**8. ಗಣಕೀಕರಣದ ಅಳವಡಿಕೆ ಮತ್ತು ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ.**

ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಸಿ onlineನಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಎಲ್ಲಾ ಲೆಕ್ಕಗಳನ್ನು ಕಂಪ್ಯೂಟರ್‌ನಲ್ಲಿ ನಿರ್ವಹಿಸಲಾಗಿದೆ. ಇದರಿಂದ ಕಾರ್ಯಕ್ಷಮತೆಯಲ್ಲಿ ಪ್ರಗತಿ ಕಂಡುಬಂದಿರುತ್ತದೆ. ಬ್ಯಾಂಕಿನಲ್ಲಿ Cyber Security Policy ಅಳವಡಿಸಿದ್ದು ಗಣಕೀಕರಣದಿಂದ ಬ್ಯಾಂಕಿನ ಲೆಕ್ಕಾಚಾರದಲ್ಲಿ ಪಾರದರ್ಶಕತೆ ಇರುತ್ತದೆ.

ಬ್ಯಾಂಕು ಸ್ವಂತ ATM ಹೊಂದಿರುವುದು Low cost ಡೆಪಾಸಿಟ್ ಜ್ಯಾಸ್ತಿಯಾಗುವ ಹೆಚ್ಚಿನ ಅವಕಾಶವಿರುತ್ತದೆ. ಡಿಜಿಟಲ್ Payment ಗಳಾದ RTGS / NEFT / E-commerce / POS / Mobile Banking / IMPS ಇತ್ಯಾದಿಗಳನ್ನು ಅಳವಡಿಸಿಕೊಂಡಿದ್ದು ಸದಸ್ಯರಿಗೆ / ಗ್ರಾಹಕರಿಗೆ ಒಳ್ಳೆಯ ಸೇವೆ ನೀಡಲಾಗುತ್ತಿದೆ. EKYC ನೋಂದಣಿ ಕಾರ್ಯ ಪ್ರಗತಿಯಲ್ಲಿದೆ.

**9. ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಚಿಸುವ ಇತರೆ ವಿಷಯಗಳ ಬಗ್ಗೆ.**

1. ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆಯನ್ವಯ ಆಧ್ಯತಾ ವಲಯಗಳಿಗೆ ಸಾಲ ನೀಡಲು ವ್ಯವಸ್ಥೆ ಮಾಡುವುದು.
2. ಸಾಲಗಾರರ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯನ್ನು ತೆಗೆದುಕೊಳ್ಳುವ ಕ್ರಮದಿಂದ ಬ್ಯಾಂಕಿಗೆ ನೀಡಿರುವ ಭದ್ರತೆ ಆಸ್ತಿಯ ವಿವರವಲ್ಲದೆ ಇತರ ಆಸ್ತಿಗಳ ವಿವರಗಳೂ ದೊರಕಿ ಸಾಲ ವಸೂಲಾತಿಗೆ ಬೇರೆ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಹಾಯವಾಗುತ್ತದೆ.
3. ಸಿಬ್ಬಂದಿಗಳಿಗೆ ಗ್ರಾಜ್ಯುಯಿಟಿ ಪಾವತಿಸುವ ಮೊತ್ತವನ್ನು LIC ಯಲ್ಲಿ ಹೂಡಿಕೆಮಾಡಿದ್ದು ಪ್ರತಿ ಸಿಬ್ಬಂದಿಗಳ ಗ್ರಾಚ್ಯುಯಿಟಿ ಮೊತ್ತ ಲೆಕ್ಕಾಚಾರ ಮಾಡಿ ತಕ್ಕಂತೆ LIC ಗೆ ಹಣ ಪಾವತಿಸುವುದು.
4. ಸಾಲ ಬಿಡುಗಡೆಯಾದ ನಂತರ ಸಾಲದ ಉಪಯುಕ್ತತೆಯ ಬಗ್ಗೆ ವರದಿ ಪಡೆಯಲು ವ್ಯವಸ್ಥೆ ಮಾಡುವುದು.
5. ಪ್ರತಿ ವರ್ಷದ ಅಂತ್ಯಕ್ಕೆ ಸಾಲಗಾರರಿಂದ ಸಾಲದ ಖಾತೆಯ ದೃಢೀಕರಣ ಪಡೆಯುವುದು.
6. ಬ್ಯಾಂಕಿನ ಸಿಬ್ಬಂದಿಯ ಕಾರ್ಯದಕ್ಷತೆ ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳಿಗೆ ಕಳುಹಿಸಿಕೊಡುವುದು.
7. ಆರ್.ಬಿ.ಐ.ನ ಸುತ್ತೋಲೆಯಂತೆ ಮನೆಕಟ್ಟಲು ಸಾಲ ನೀಡಿದ ಪ್ರಕರಣಗಳಲ್ಲಿ ಅನುಮೋದನೆಯಾದ ನಕ್ಷೆಯಂತೆ ಮನೆ ಕಟ್ಟುವ ಬಗ್ಗೆ ಸಾಲಗಾರರಿಂದ ಮುಚ್ಚಳಿಕೆ ಪಡೆಯುವುದು.

8. ಸಿಬ್ಬಂದಿಗಳಿಗೆ ನಿವೃತ್ತಿ / ಮರಣ / ಕೆಲಸ ಬಿಟ್ಟಾಗ ಪಾವತಿಸುವ ಗಳಿಕೆ ರಜ ಮೊತ್ತವನ್ನು LIC ಯಲ್ಲಿ ಹೂಡಿಕೆ ಮಾಡಿದ್ದು ಗಳಿಕೆ ರಜೆ ಮೊತ್ತವನ್ನು ಗರಿಷ್ಠ 300 ದಿನಗಳಿಗೆ ನೀಡಬೇಕಾಗಿದ್ದು ತಕ್ಕಂತೆ ಗಳಿಕೆ ರಜೆ ವಂತಿಕೆಯನ್ನು LIC ಗೆ ಪಾವತಿಸುವುದು.

9. ಸ್ಥಿರ ಆಸ್ತಿಯ ಮೇಲೆ ಸಾಲ ನೀಡಿದ ನಂತರ ಕಾಲಕಾಲಕ್ಕೆ ಭದ್ರತೆಗಳ/ಸ್ಥಾವರಗಳ ಪರಿವೀಕ್ಷಣೆ ಮಾಡಿ ಬಾಕಿ ಸಾಲಕ್ಕೆ ಭದ್ರತೆ ಇರುವ ಬಗ್ಗೆ ವರದಿ ಮತ್ತು ಇದರ ಪೂರಕ ಮೌಲ್ಯಮಾಪನ ವರದಿಯನ್ನು ಪಡೆಯಬೇಕು (ವಿಶೇಷವಾಗಿ ಸುಸ್ತಿಸಾಲಗಳಲ್ಲಿ)

10. ಅನುತ್ಪಾದಕ ಸಾಲಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಕಡ್ಡಾಯವಾಗಿ ಆಧಾರ ಮಾಡಿರುವ ಆಸ್ತಿಗಳ ಮೌಲ್ಯವನ್ನು ಆಗಾಗ್ಗೆ ದೃಢಪಡಿಸಿಕೊಳ್ಳುವುದು. ಕೊರತೆಯಾದಲ್ಲಿ ಸಮರ್ಪಕ ಭದ್ರತೆ ಪಡೆಯುವುದು, ಇಲ್ಲವಾದಲ್ಲಿ ನಿಯಮಾನುಸಾರ ಸಾಲವನ್ನು ಹಿಂಪಡೆಯಲು ಕ್ರಮ ಕೈಗೊಳ್ಳುವುದು.

11. ಬ್ಯಾಂಕಿಗೆ ಆಧಾರ ನೀಡಿರುವ ಸ್ಥಿರಾಸ್ತಿಗಳನ್ನು ಆರ್.ಬಿ.ಐ.ನ ಸೂಚನೆಯನ್ವಯ ಮೂರು ವರ್ಷಕ್ಕೊಮ್ಮೆ ಮರು ಮೌಲ್ಯಮಾಪನ ಮಾಡಿಸುವುದು.

**(34) ಬ್ಯಾಂಕಿನ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ವಿಮರ್ಶೆ/ವಿಶ್ಲೇಷಣೆ:**

ದಿನಾಂಕ 31.3.2023 ಮತ್ತು 31.3.2024ಕ್ಕೆ ಆದಾಯ ವೆಚ್ಚದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಆದಾಯದ ವಿವರಗಳು | 31.3.2023ಕ್ಕೆ | 31.3.2024ಕ್ಕೆ |
|---|---|---|---|
| 1. | ಸಾಲಗಳ ಮೇಲೆ ಬಂದ ಬಡ್ಡಿ | 1006.15 | 1015.09 |
| 2. | ಹೂಡಿಕೆ ಮತ್ತು ಠೇವಣಿಗಳ ಮೇಲೆ ಬಂದ ಬಡ್ಡಿ | 425.65 | 452.20 |
| 3. | ಇತರೆ ಆದಾಯ | 53.11 | 37.27 |
| | **ಒಟ್ಟು** | **1484.91** | **1504.56** |

| ಕ್ರ. ಸಂ. | ಖರ್ಚಿನ ವಿವರಗಳು | 31.3.2023ಕ್ಕೆ | 31.3.2024ಕ್ಕೆ |
|---|---|---|---|
| 1. | ಠೇವಣಿಗಳ ಮೇಲೆ ನೀಡಿರುವ ಬಡ್ಡಿ | 826.52 | 825.59 |
| 2. | ಸವಕಳಿ / ಅವಕಾಶ / ಸಿಬ್ಬಂದಿ ವೆಚ್ಚ ಆಡಳಿತ ವೆಚ್ಚ ಇತ್ಯಾದಿ | 553.74 | 571.12 |
| 3. | ನಿವ್ವಳ ಲಾಭ | 104.65 | 107.85 |
| | **ಒಟ್ಟು** | **1484.91** | **1504.56** |

ಕಳೆದ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಒಟ್ಟಾರೆ ಆದಾಯದಲ್ಲಿ ರೂ. 19.65 ಲಕ್ಷ ಜಾಸ್ತಿಯಾಗಿದೆ ವರದಿ ಸಾಲಿನಲ್ಲಿ ಸಾಲ ನೀಡಿಕೆಯಲ್ಲಿ ರೂ. 412.61 ಲಕ್ಷದಷ್ಟು ಜಾಸ್ತಿಯಾಗಿದೆ. ವರದಿ ಸಾಲಿನಲ್ಲಿ ಒಟ್ಟಾರೆ ಠೇವಣಿ ಪ್ರಮಾಣದಲ್ಲಿ ರೂ. 479.50 ಲಕ್ಷದಷ್ಟು ಕಡಿಮೆಯಾಗಿರುತ್ತದೆ.

**ಲಾಭ–ನಷ್ಟದ ತ:ಖ್ತೆ:–**

**ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ:**

ದಿನಾಂಕ 31.03.2024ರ ಅಂತ್ಯಕ್ಕೆ ರೂ 1,07,85,164.98 ಗಳ ನಿವ್ವಳ ಲಾಭ ಬ್ಯಾಂಕು ಗಳಿಸಿರುತ್ತದೆ.

**ಬ್ಯಾಂಕ್ ಪ್ರಸಕ್ತ 2023–2024ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣೀಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಶೆ.**

ಅವಶ್ಯವಿರುವ ಎಲ್ಲಾ ಅವಕಾಶಗಳನ್ನು ಮಾಡಲಾಗಿದೆ.

**ವರ್ಷಾಂತ್ಯಕ್ಕೆ ಬರತಕ್ಕ ಸಾಲಗಳ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ)ರನ್ವಯ ನಿಬಂಧಕರ ಮಂಜೂರಿ ಪಡೆಯಲಾಗಿದೆಯೇ?**

ಬರತಕ್ಕ ಸಾಲಗಳ ಬಡ್ಡಿಯನ್ನು ಆಧಾಯವೆಂದು ಪರಿಗಣಿಸಿರುವುದಿಲ್ಲ.

**ಬ್ಯಾಂಕ್ ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದೆಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಷೆ.**

ಪ್ರಸಕ್ತ ಸಾಲಿಗೆ ನಿವ್ವಳ ಲಾಭ ರೂ. 107.85 ಲಕ್ಷಗಳಿಸಿದ್ದು, ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಬ್ಯಾಂಕಿನ ನಿವ್ವಳ ಲಾಭ ಜಾಸ್ತಿಯಾಗಿರುತ್ತದೆ. ಒಳ್ಳೆಯ ಸಾಲಗಾರರನ್ನು ಗುರುತಿಸಿ ಸಾಲ ನೀಡಿ ಆದಾಯ ಹೆಚ್ಚಿಸುವುದು.

**ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ.**

ಯಾವುದು ಇರುವುದಿಲ್ಲ. ಆಯಾ ಸಾಲುಗಳಲ್ಲಿಯೇ ನಿವ್ವಳ ಲಾಭ ವಿಲೇವಾರಿ ಮಾಡಲಾಗಿದೆ.

**ನಷ್ಟವಾಗಿದಲ್ಲಿ ಕಾರಣಗಳು :** ಅನ್ವಯಿಸುವುದಿಲ್ಲ.

**(35) ಇತರೆ ಶರಾ ಹಾಗೂ ಬಾಬ್ತುಗಳು:**

**ಲೆಕ್ಕನಿರ್ವಹಣಾ ಕಾರ್ಯನೀತಿ/ಅದು ಲೆಕ್ಕನಿರ್ವಹಣಾ ಪ್ರಮಾಣಕ್ಕನುಗುಣವಾಗಿದೆಯೇ? :**

1. ಬ್ಯಾಂಕಿನಲ್ಲಿ ತನ್ನ ಗ್ರಾಹಕರ ಕೆವೈಸಿ ನೋಂದಣಿಯ ಕಾರ್ಯ ಪ್ರಗತಿಯಲ್ಲಿದೆ ಹಾಗೂ ಗ್ರಾಹಕರ Cersai ನೋಂದಣಿಯ ಕಾರ್ಯ ಪ್ರಗತಿಯಲ್ಲಿದೆ.
2. EC ಮತ್ತು ಆಸ್ತಿ ತೆರಿಗೆ ರಶೀದಿಯನ್ನು ವಾರ್ಷಿಕವಾಗಿ ಸದಸ್ಯರಿಂದ ಪಡೆದುಕೊಳ್ಳಲು ಸೂಚಿಸಲಾಗಿದೆ.
3. ಅನುತ್ಪಾದಕ ಸಾಲಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ರಮ ಅಗತ್ಯ.
4. ಬ್ಯಾಂಕಿನಲ್ಲಿ ಲೆಕ್ಕಗಳನ್ನು ಗಣಕಯಂತ್ರಕ್ಕೆ ಅಳವಡಿಸಿದ್ದು, ಬ್ಯಾಂಕ್ ಅಳವಡಿಸಿರುವ ಕಾರ್ಯನೀತಿಯು ನಿರ್ವಹಿಸುತ್ತಿರುವ ಲೆಕ್ಕದ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ.
5. ಎಲ್ಲಾ ವೆಚ್ಚಗಳನ್ನು ಆ ಸಾಲಿನ ವೆಚ್ಚವೆಂದು ಪರಿಗಣಿಸಿ ಕೊಡಬೇಕಾಗಿರುವ ಎಲ್ಲಾ ವೆಚ್ಚಗಳಿಗೆ ಅವಕಾಶ ಕಲ್ಪಿಸಿದೆ.
6. ಆದ್ಯತಾ ವಲಯಕ್ಕೆ ನೀಡಬೇಕಾಗಿರುವ ಸಾಲಗಳನ್ನು ಕ್ರಮಬದ್ಧವಾಗಿ ನೀಡಲು ಕ್ರಮ ಅಗತ್ಯ.
7. ಬ್ಯಾಂಕಿನಲ್ಲಿ ಕೆಲವು ಆಯ್ದಾ ಚಿನ್ನಾಭರಣಗಳ ಪ್ಯಾಕೆಟ್‌ಗಳನ್ನು ಪರಿಶೀಲಿಸಿದ್ದು ಕ್ರಮಬದ್ಧವಾಗಿರುತ್ತದೆ.
8. ವರದಿ ಸಾಲಿನಲ್ಲಿ GST ಹಾಗೂ TDS ಕಡಿತ ಮಾಡಿರುವುದನ್ನು ಪ್ರತಿ ತಿಂಗಳು ನಿಗದಿತ ದಿನಾಂಕದೊಳಗೆ ಪಾವತಿಸಿರುತ್ತಾರೆ.
9. ಬ್ಯಾಂಕಿನ ಬಡ್ಡಿ ಮತ್ತು ಇತರೆ ಆದಾಯದ ಬಾಬ್ತುಗಳು ಬ್ಯಾಂಕಿಗೆ ಜಮಾ ಬಂದಾಗ ಮಾತ್ರ ಆದಾಯವೆಂದು ಪರಿಗಣಿಸಲಾಗುತ್ತಿದೆ.
10. ಬ್ಯಾಂಕು ನಾಲ್ಕು ಸಾಲ ಮಾಹಿತಿ ಸಂಸ್ಥೆಯ ಸದಸ್ಯತ್ವ ಪಡೆದಿದ್ದು ಮಾಹಿತಿ ವಿನಿಮಯ ಮಾಡುವುದು. ರೂ 10 ಲಕ್ಷಕ್ಕಿಂತ ಹೆಚ್ಚು ಸಾಲ ನೀಡಿದ ಪ್ರಕರಣಗಳಲ್ಲಿ CIBIL ವರದಿ ಪಡೆಯುವುದು.
11. ಸಾಲ ಬಿಡುಗಡೆಯಾದ ನಂತರ ಸಾಲದ ಉಪಯುಕ್ತತೆ ಬಗ್ಗೆ ವರದಿ ಪಡೆಯುವ ಬಗ್ಗೆ ವ್ಯವಸ್ಥೆ ಮಾಡಿಸುವುದು.
12. ಸ್ಥಿರ ಆಸ್ತಿಗಳ ಸವಕಳಿಯನ್ನು ಕಳೆದು ಆಸ್ತಿ ಜವಾಬ್ದಾರಿ ಪಟ್ಟಿಯಲ್ಲಿ ತೋರಿಸಿರುತ್ತಾರೆ.
13. ಬ್ಯಾಂಕಿನಲ್ಲಿ ಲೆಕ್ಕಗಳನ್ನು ಗಣಕ ಯಂತ್ರಕ್ಕೆ ಅಳವಡಿಸಿರುತ್ತಾರೆ.
14. ಸ್ಥಿರ ಆಸ್ತಿಗಳ ಮೇಲೆ ಸವಕಳಿಯನ್ನು ಪೂರಾ ವರ್ಷಕ್ಕೆ ತಗ್ಗಿಸುವ ಬೆಲೆಯ ಪದ್ದತಿಯನ್ನು ಅನುಸರಿಸುತ್ತಿದೆ. ಕಂಪ್ಯೂಟರ್ಸ್ ಮೇಲೆ ನೇರ ಸವಕಳಿ (Straight line) ಪದ್ಧತಿಯಲ್ಲಿ ಸವಕಳಿ ತೆಗೆಯಲಾಗಿದೆ.
15. ಇತ್ತೀಚಿನ ತಾಂತ್ರಿಕತೆಯ ಮತ್ತು ಅಗತ್ಯ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಸಿಬ್ಬಂದಿಗಳನ್ನು ಕಾಲಕಾಲಕ್ಕೆ ತರಬೇತಿಗೆ ಕಳುಹಿಸುವುದು.
16. ಬ್ಯಾಂಕಿನ ಭದ್ರತೆಯ ದೃಷ್ಟಿಯಿಂದ CCTV, Security ಹಾಗೂ Burglar Alarm ಅಳವಡಿಸಿಕೊಂಡು ವ್ಯವಹರಿಸುತ್ತಿದ್ದಾರೆ.

**(36)ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು.**

ಲೆಕ್ಕಪರಿಶೋಧನಾ ವರದಿಯಲ್ಲಿರುವ ಪ್ರಮುಖ ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

1. ಬ್ಯಾಂಕಿನಲ್ಲಿ ಕೆಲವು ಲಾಕರ್‌ಗಳು ಖಾಲಿ ಇದ್ದು, ಬ್ಯಾಂಕ್ ಲಾಕರ್‌ಗಳನ್ನು ಹೊಂದಿರುವ ಬಗ್ಗೆ ಪ್ರಚಾರ ನೀಡಿ ಖಾಲಿ ಇರುವ ಲಾಕರ್‌ಗಳನ್ನು ಬಾಡಿಗೆ ನೀಡಿ ಆದಾಯ ಹೆಚ್ಚಿಸಿಕೊಳ್ಳಲು ಕ್ರಮವಿಡುವುದು. ಬಾಕಿ ಇರುವ ಲಾಕರ್ ಬಾಡಿಗೆಯನ್ನು ಹಾಗೂ ಪರಿಷ್ಕತ ಲಾಕರ್ ಅಗ್ರಿಮೆಂಟ್ ಅನ್ನು ಸಂಬಂಧಪಟ್ಟವರಿಂದ ಪಡೆಯಲು ಸೂಚಿಸಿದೆ.
2. RBI ನ ನಿರ್ದೇಶನದಂತೆ ಕಟ್ಟಡ ಕಟ್ಟುವುದಕ್ಕಾಗಿ ಸಾಲ ನೀಡಿದ ಪ್ರಕರಣಗಳಲ್ಲಿ ಸಾಲಗಾರರಿಂದ ಕಟ್ಟಡವನ್ನು ಅನುಮೋದನೆಯಾದ ನಕ್ಷೆಯ ಪ್ರಕಾರವೇ ಕಟ್ಟುವುದಾಗಿ ಮುಚ್ಚಳಿಕೆಯನ್ನು ಪಡೆಯಲು ವ್ಯವಸ್ಥೆ ಮಾಡುವುದು.

3. ಅನುತ್ಪಾದಕ ಮತ್ತು ಸುಸ್ತಿ ಸಾಲಗಳ ವಸೂಲಾತಿ ಚುರುಕುಗೊಳಿಸಿ, ಉತ್ತಮ ಹತೋಟಿ ಹೊಂದುವುದು.
4. ಬ್ಯಾಂಕು ಯಾವ ಉದ್ದೇಶಕ್ಕೆ ಸಾಲ ನೀಡಿರುತ್ತದೋ, ಪಡೆದ ಸಾಲವನ್ನು ಅದೇ ಉದ್ದೇಶಕ್ಕೆ ಬಳಸಿಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳುವುದು.
5. ಬ್ಯಾಂಕಿನಲ್ಲಿ ನಗದು ಶಿಲ್ಕನ್ನು ಮಿತಿಗಿಂತ ಹೆಚ್ಚಿಗೆ ಇಟ್ಟಿದ್ದು ಇದನ್ನು ನಿಗಧಿತ ಮಿತಿಯಲ್ಲಿಯೇ ನಿರ್ವಹಿಸಲು ಸೂಚಿಸಲಾಗಿದೆ.
6. ಬ್ಯಾಂಕಿನಿಂದ ನೀಡಿರುವ ವಿವಿಧ ಸಾಲಗಳ ಸದುಪಯೋಗದ ಬಗ್ಗೆ ವರದಿ ಪಡೆಯುವುದು.
7. ಅನುತ್ಪಾದಕ ಆಸ್ತಿಗಳ ಪ್ರಮಾಣ ಕಡಿಮೆ ಮಾಡಲು ಕ್ರಮವಿಡುವುದು.
8. ಮೂರು ವರ್ಷದ ಅವಧಿಗೆ ಮೇಲ್ಪಟ್ಟ ಅವಧಿಯ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಹಿಸುತ್ತಿರುವುದು ಕ್ರಮವಾಗಿದೆ. ರಿಸರ್ವ್ ಬ್ಯಾಂಕ್‌ನ ಆದೇಶದನುಸಾರ ಸುಸ್ತಿದಾರರಿಗೆ ಹೆಚ್ಚಿನ ಸಾಲದ ಸವಲತ್ತು ನೀಡದಿರುವುದು ಸೂಕ್ತ.
9. ಉಳಿತಾಯ ಹಾಗೂ ಚಾಲ್ತಿ ಖಾತೆಗಳಲ್ಲಿ ಕನಿಷ್ಠ ಶಿಲ್ಕು ಕಾಯ್ದುಕೊಳ್ಳುವಂತೆ ವ್ಯವಸ್ಥೆ ಮಾಡುವುದು.
10. ಸಾಲ ಮಂಜೂರು ಮಾಡುವಾಗ, ಆದಾಯ, ಮರುಪಾವತಿ ಸಾಮರ್ಥ್ಯ ಇತ್ಯಾದಿ ಅಂಶಗಳನ್ನು ಪರಿಗಣಿಸುವುದು.
11. ಸಾಲ ಮತ್ತು ಮುಂಗಡಗಳನ್ನು ನೀಡುವ ಪೂರ್ವದಲ್ಲಿ ಸಾಲದ ಭದ್ರತೆಗೆ ಪ್ರಾಮುಖ್ಯತೆ ಕೊಡುವುದರ ಜೊತೆಗೆ ಮಂಜೂರಾದ ಸಾಲವು ಉದ್ದೇಶಕ್ಕೆ ಸದ್ಬಳಕೆಯಾದ ಬಗ್ಗೆ ವರದಿ ಪಡೆಯುವುದು.
12. ಬ್ಯಾಂಕಿನ ನಿರ್ದೇಶಕರ ಸಂಬಂಧಿಕರು ಮತ್ತು ಅವರು ಆಸಕ್ತಿ ಹೊಂದಿರುವ ಸಂಘ ಸಂಸ್ಥೆಗಳ ವಿವರ ಪಡೆದು ಈ ಬಗ್ಗೆ ರಿಜಿಸ್ಟರ್ ನಿರ್ವಹಿಸುವುದು.

**(37) ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:**

ಬ್ಯಾಂಕಿನ ಲೆಕ್ಕಪರಿಶೋಧನೆಯನ್ನು ಮಾಡಿದ ನಂತರ ಬ್ಯಾಂಕಿಗೆ 'ಎ' ವರ್ಗ ಎಂದು ವರ್ಗೀಕರಿಸಲಾಗಿದೆ. ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿನ ನ್ಯೂನತೆಗಳ ಬಗ್ಗೆ ಕಂಡಿಕೆ 33(9) ಹಾಗೂ 36ರಲ್ಲಿ ಪ್ರಸ್ತಾಪಿಸಲಾಗಿದೆ.

**(38) ಕಡ್ಡಾಯ ಲಗತ್ತುಗಳು :**

1. ಜಮಾ ಖರ್ಚು ತ:ಖ್ತೆ
2. ಲಾಭ–ನಷ್ಟ ತ:ಖ್ತೆ
3. ಆಸ್ತಿ–ಜವಾಬ್ದಾರಿ ತ:ಖ್ತೆ
4. ಕುಳುವಾರು ಪಟ್ಟಿಗಳು, ದೃಢೀಕರಣಗಳು, ಬ್ಯಾಂಕ್ ಸಮನ್ವಯ ತ:ಖ್ತೆ
5. ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತ:ಖ್ತೆಯ ಛಾಯಾ ಪ್ರತಿಯನ್ನು ಲಗತ್ತಿಸಿದೆ.

**ಮೆ॥ ಬಿ ಆರ್ ಆರ್ ಅಂಡ್ ಕಂಪನಿ**
ಚಾರ್ಟರ್ಡ್ ಅಕೌಂಟೆಂಟ್ಸ್
FRN 012266S

ದಿನಾಂಕ: 03–06–2024

ಸ್ಥಳ: ಬೆಂಗಳೂರು

ಸಹಿ /–
